4 ದಿನದ ಕೃಷಿ ಮೇಳಕ್ಕೆ ತೆರೆ: 16 ಲಕ್ಷ ಜನ ಭೇಟಿ

₹5.28 ಕೋಟಿ ವಹಿವಾಟು | 100ಕ್ಕೂ ಹೆಚ್ಚು ಕೃಷಿ ಸಾಧಕರಿಗೆ ಸನ್ಮಾನ | ಸಿರಿಧಾನ್ಯ, ಕೋಳಿ, ಮೀನು ಮರಿ ಹೆಚ್ಚು ಮಾರಾಟ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಾಲ್ಕು ದಿನ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಹೆಬ್ಬಾಳದ ಜಿಕೆವಿಕೆಯಲ್ಲಿ ಆಯೋಜಿಸಿದ್ದ 'ಕೃಷಿ ಮೇಳ'ಕ್ಕೆ ಸೋಮವಾರ ತೆರೆ ಬಿದ್ದಿದ್ದು, ಸುಮಾರು 16 ಲಕ್ಷ ಜನ ಭೇಟಿ ನೀಡಿದ್ದಾರೆ. ಸುಮಾರು ₹5.28 ಕೋಟಿ ವಹಿವಾಟು ನಡೆದಿದೆ.

'ಆಹಾರ-ಆರೋಗ್ಯ-ಆದಾಯಕ್ಕಾಗಿ ಸಿರಿಧಾನ್ಯಗಳು' ಘೋಷವಾಕ್ಯದಡಿ ಆಯೋಜಿಸಿದ್ದ ನ.17ರಿಂದ ಆರಂಭಗೊಂಡ ಕೃಷಿ ಮೇಳಕ್ಕೆ ಒಟ್ಟಾರೆ 16 ಲಕ್ಷ ಜನ ಭೇಟಿ ನೀಡಿದ್ದಾರೆ. ವಿವಿಯ ರಿಯಾಯಿತಿ ದರದ ಮಧ್ಯಾಹ್ನದ ಮುದ್ದೆ ಊಟವನ್ನು 35,400 ಮಂದಿ ಸವಿದಿದ್ದಾರೆ.



ನ.17ರಂದು 1.31 ಲಕ್ಷ ಜನ ಆಗಮಿಸಿದ್ದು ₹80 ಲಕ್ಷ ವಹಿವಾಟು ನಡೆದಿತ್ತು. 8 ಸಾವಿರ ಮಂದಿ ಮಧ್ಯಾಹ್ನದ ಊಟ ಸೇವಿಸಿದ್ದರು. ನ.18 ರಂದು 5.48 ಲಕ್ಷ ಮಂದಿ ಭೇಟಿ ನೀಡಿದ್ದು, ₹1.38 ಕೋಟಿ ವಹಿವಾಟಾಗಿತ್ತು. 9600 ಜನ ಊಟ ಸೇವಿಸಿದ್ದರು. ನ.19ರಂದು 5.10 ಲಕ್ಷ ಸಾರ್ವಜನಿಕರು ಆಗಮಿಸಿದ್ದು ₹1.65 ಕೋಟಿ ವಹಿವಾಟು ನಡೆದಿತ್ತು. 9300 ಭೋಜನ ಸವಿದಿದ್ದರು. ಕೊನೆಯ ದಿನವಾದ ನ.20 ರಂದು 3.78 ಲಕ್ಷ ಜನ ಆಗಮಿಸಿದ್ದು ₹1.45 ಕೋಟಿ ವಹಿವಾಟು ನಡೆದಿದೆ. 8500 ಮಂದಿ ಮಧ್ಯಾಹ್ನ ಊಟ ಸೇವಿಸಿದ್ದಾರೆ ಎಂದು ವಿವಿ ಮೂಲಗಳು ತಿಳಿಸಿವೆ.

ರಾಜ್ಯ ಮಟ್ಟದ ಹಲವು ಪ್ರಶಸ್ತಿಗಳು, ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ, ಚಾಮರಾಜ ನಗರ, ಮೈಸೂರು, ಹಾಸನ, ಮಂಡ್ಯ, ತುಮಕೂರು ಜಿಲ್ಲೆಗಳ ಜಿಲ್ಲಾ ಮತ್ತು ತಾಲೂಕು ಮಟ್ಟದ ಪ್ರಗತಿಪರ, ಯುವ, ರೈತ ಮಹಿಳೆ ಪ್ರಶಸ್ತಿಗೆ ಭಾಜನರಾದನೂರಕ್ಕೂ ಅಧಿಕ ಸಾಧಕರನ್ನು ಮೇಳದಲ್ಲಿ ಗೌರವಿಸಲಾಯಿತು.

ಮೇಳದಲ್ಲಿ 625 ಮಳಿಗೆಗಳನ್ನು ತೆರೆದಿದ್ದು, ಸಿರಿಧಾನ್ಯಗಳ ಉತ್ಪನ್ನ, ಹೂವು-ಹಣ್ಣಿನ ಸಸಿ, ಗೃಹೋಪಯೋಗಿ ವಸ್ತು, ಕೋಳಿ ಮರಿ, ಅಕ್ವೇರಿಯಂ ಮೀನುಗಳು ಹೆಚ್ಚಿನ ಪ್ರಮಾಣದಲ್ಲಿ ಮಾರಾಟವಾದವು. ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು, ರೈತ ಸ್ವಸಹಾಯ ಸಂಘಗಳ ಸದಸ್ಯರು, ನಗರದ ನಿವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಮೇಳಕ್ಕೆ ಆಗಮಿಸಿದ್ದು ಕಂಡುಬಂತು.

ಪ್ರಶಸ್ತಿ ಪ್ರದಾನ: ಕೃಷಿ ಮೇಳದ ಕೊನೆಯ ದಿನವಾದ ಸೋಮವಾರ ಸಂಜೆ ವಿವಿಧ ವಿಭಾಗಗಳಲ್ಲಿ, ವಿಶೇಷವಾದ ಮಳಿಗೆಗಳ ಮಾಲಿಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಿರಿಧಾನ್ಯ, ಸಾವಯವ ಕೃಷಿ, ನೀರಾವರಿ ಉಪಕರಣ, ಕೃಷಿಗೆ ಸಂಬಂಧಿಸಿದ ಅತ್ಯುತ್ತಮ ಔಷಧಿ ಮಳಿಗೆ, ನರ್ಸರಿ, ರೈತ ಉತ್ಪಾದಕ ಸಂಸ್ಥೆ, ಸ್ವಸಹಾಯ ಗುಂಪುಗಳು ಮತ್ತಿತರ ವಿಭಾಗದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.



ಕೃಷಿ ಮೇಳವು ನಮ್ಮ ಸಿರಿಧಾನ್ಯ ಉತ್ಪನ್ನಗಳನ್ನು ಪ್ರಚಾರ ಮಾಡಲು ಉತ್ತಮ ವೇದಿಕೆಯಾಯಿತು. ಜನರಿಂದಲೂ ಉತ್ತಮ ಪ್ರತಿಕ್ರಿಯೆ ದೊರೆಯಿತು. ನಮಗಂತೂ ಸಾಕಷ್ಟು ವಹಿವಾಟು ನಡೆಯಿತು.

• **ಕೆ.ಆಶ್ವಿನಿ** ಸೊಣ್ಣೇನಹಳ್ಳಿ ಸೋ ಹಲ್ತಿ ಸೋಯಾ



ಕೃಷಿ ಮೇಳದಿಂದ ನೂತನ ತಂತ್ರಜ್ಞಾನ, ತಳಿ, ಬಿತ್ತನೆ ಬೀಜ, ಕೃಷಿ ಸಲಕರಣೆಗಳ ಬಗ್ಗೆ ತಿಳಿಯಲು ಅನುಕೂಲವಾಯಿತು. ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ಆಯೋಜಿಸಿದ್ದರಿಂದ ಸಾಕಷ್ಟು ಮಾಹಿತಿ ದೊರೆಯಿತು

• **ಎಸ್.ಕೆ.ರಾಜು** ಕೆ.ಆರ್.ನಗರದ ರೈತ

ಕಂಬಳಿಗೆ ಬೇಡಿಕೆ, ಲಾಭದ ಹಣ ಮಕ್ಕೆ



ಕೃಷಿ ಮೇಳದಲ್ಲಿ ಕುರಿ ಉಣ್ಣೆಯ ಉತ್ಪನ್ನಗಳ ಮಾರಾಟ ಹೆಚ್ಚು ಕಂಡು ಬಂದಿತು. ಚಿತ್ರದುರ್ಗ ಜಿಲ್ಲೆಯ ಕೊಡ್ಲಹಳ್ಳಿ ಉಣ್ಣೆ ಕೈಮಗ್ಗದ ನೇಕಾರರ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘದವರು 22 ನಮೂನೆಯ ಉಣ್ಣೆಯ ಉತ್ಪನ್ನಗಳನ್ನು ಮಾರಾಟಕ್ಕಿಟ್ಟಿದ್ದು ಉತ್ತಮ ವಹಿವಾಟು ನಡೆಯಿತು.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಮಳಿಗೆಯ ರವಿಕುಮಾರ್, 'ನಾನು ಮಣಿಪಾಲ್ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಕಂಬಳಿ, ಕಂಕಣ, ಟೋಪಿ, ಗದ್ದಿಗೆ ಕಂಬಳಿ, ಶಾಲು, ಯೋಗ ಮ್ಯಾಟ್ ಸೇರಿದಂತೆ 22 ಉತ್ಪನ್ನಗಳನ್ನು ಮಾರಾಟಕ್ಕೆ ತಂದಿದ್ದೆವು. ಒಳ್ಳೆಯ ವ್ಯಾಪಾರವಾಯಿತು. ವ್ಯಾಪಾರದಿಂದ ಬಂದ ಲಾಭದ ಹಣವನ್ನು ತಿಂಥಿಣಿ ಮಕ್ಕೆ ನೀಡುತ್ತೇವೆ' ಎಂದು ತಿಳಿಸಿದರು.

The Hindu Bureau
BENGALURU

Despite a drought-like situation throughout Karnataka, Krishi Mela 2023, a four-day farming exposition, which concluded here on Monday, received an encouraging response from the farmers' community, said S.V. Suresha, Vice-Chancellor of the University of Agricultural Sciences (UAS).

The mela, held at Gandhi Krishi Vigyana Kendra (GKVK) campus here between November 17 and 20 cumulatively received 15.6 lakh visitors, mostly farmers, who purchased seeds, plants, millets, poultry items, ornamental fish, and machinery/equipment for farming, harvesting and irrigation and also tractors, tillers and other items worth ₹5 crore, he told *The Hindu*.

This year's farmer turnout was slightly lower than last year's 17 lakh. However, he said the response to this year's mela was certainly overwhelming especially when most farmers were reeling under drought.

"We are very happy to see that farmers came in large numbers despite drought-triggered challenges. The numbers were quite encouraging and they were keen to explore all innovative technologies and devices displayed at Krishi Mela," he said.

According to him, the theme was quite suitable to the existing ground reality in agriculture and it helped farmers to understand how to farm better during drought-like situations. A large number of small and medium farmers have shown interest in farming and harvesting machinery to reduce the drudgery involved in agriculture practices, he observed.

Some 150 farmers from 10 districts, including Bengaluru Urban, Bengaluru Rural, Chickballapur, Kolar, Mandya, Mysuru, Hassan, Tumakuru, Chamarajpet, and Ramanagara, which come under UAS-B, were honoured and cash awarded for their best practices and contribution in farming.

"One young male and one female farmer from each taluk and district were recognised," he added.

According to Dr. Suresha, a large number of farmers visited the crop museum at Krishi Mela that showcased diverse technologies supported by on-the-field experience.

ರೈತರಿಗೆ ವಧು ಸಿಗದಿರುವುದು ಬೇಸರ: ಗುರೂಜಿ

ಅನ್ನವಿಲ್ಲದೆ ಕಂಪ್ಯೂಟರ್, ಮೊಬೈಲ್ ಸೇವಿಸಿ ಬದುಕಲು ಸಾಧ್ಯವೇ?: ಆನಂದ ಗುರೂಜಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ದೇಶಕ್ಕೆ ಅನ್ನ ನೀಡುವ ರೈತರನ್ನು ವಿವಾಹವಾಗಲು ಹೆಣ್ಣು ಮಕ್ಕಳು ಸಿಗದಿರುವುದು ದುರದೃಷ್ಟಕರ ಎಂದು ಮಹರ್ಷಿ ಆನಂದ ಗುರೂಜಿ ಬೇಸರ ವ್ಯಕ್ತಪಡಿಸಿದರು.

ಹೆಬ್ಬಾಳದ ಜಿಕೆವಿಕೆಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಆಯೋಜಿಸಿದ್ದ ಕೃಷಿ ಮೇಳದ ಪ್ರಶಸ್ತಿ ಪ್ರದಾನ, ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಿಂದೆ ರೈತರನ್ನು ವಿವಾಹವಾಗಲು ಹೆಣ್ಣು ಮಕ್ಕಳು ಮುಗಿಬೀಳುತ್ತಿದ್ದರು. ಆದರೆ ಇಂದಿನ ಪರಿಸ್ಥಿತಿಯಲ್ಲಿ ವಧು ಸಿಗದಿರುವುದು ಬೇಸರದ ಸಂಗತಿಯಾಗಿದೆ. ರೈತರು ದೇಶಕ್ಕೇ ಅನ್ನ ನೀಡುತ್ತಾರೆ. ರೈತರಿಲ್ಲದ ಬದುಕು ಎಲ್ಲರಿಗೂ ಅಸಾಧ್ಯವಾಗಿದೆ. ಅನ್ನವಿಲ್ಲದೆ ಕಂಪ್ಯೂಟರ್, ಮೊಬೈಲ್, ಟಿವಿಗಳನ್ನು ಸೇವಿಸಿ ಬದುಕಲು ಸಾಧ್ಯವೇ ಎಂದು ಪ್ರಶ್ನಿಸಿದರು.



ಹೆಬ್ಬಾಳದ ಜಿಕೆವಿಕೆಯಲ್ಲಿ ನಡೆದ ಕೃಷಿ ಮೇಳದ ಸಮಾರೋಪದಲ್ಲಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆ ಸಾಧಕರಿಗೆ ಜಿಲ್ಲಾ ಮಟ್ಟದ ಪ್ರಗತಿಪರ ರೈತ, ರೈತ ಮಹಿಳೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮಹರ್ಷಿ ಆನಂದ ಗುರೂಜಿ, ಡಾ। ಎಸ್.ವಿ.ಸುರೇಶ ಹಾಜರಿದ್ದರು.

ರೈತರಿಗೆ ಪ್ರೇರಣೆ: ದೇಶಕ್ಕೆ ಅನ್ನ ನೀಡುತ್ತಿರುವ ರೈತರನ್ನು ಸನ್ಮಾನಿಸುತ್ತಿರುವುದು ಸಂತೋಷದ ಸಂಗತಿಯಾಗಿದೆ. ಕೃಷಿಯಲ್ಲಿ ಸಾಧನೆ ಮಾಡಿದವರಿಗೆ ಸನ್ಮಾನ ಮಾಡುವುದರಿಂದ ಅದು ಇತರ ರೈತರಿಗೆ ಪ್ರೇರಣೆಯಾಗಲಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ ಸಾಧಕರಿಗೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಪ್ರಗತಿಪರ ರೈತ, ರೈತ ಮಹಿಳೆ, ಆತ್ಯುತ್ತಮ ಯುವ ರೈತ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ದಕ್ಷಿಣ ಕರ್ನಾಟಕದ 10 ಜಿಲ್ಲೆಯ 15 ತಂಡಗಳ 900 ದೇಸಿ ವಿದ್ಯಾರ್ಥಿಗಳು ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ। ಎಸ್. ವಿ.ಸುರೇಶ ಮತ್ತಿತರರು ಉಪಸ್ಥಿತರಿದ್ದರು.

21-11-2023
kannadaprabha Pg 05

Krishi Mela sees 15.6 lakh visitors; captures wallet share of ₹5 crore



Visitors at demonstration fields at the Krishi Mela in Bengaluru on Monday. K. MURALI KUMAR

21-11-2023
Hindu Pg 02

For more information visit
University Library Website
Web - uasbagrilibindia.org
E-mail- librarian@uasbangalore.edu.in

ನಾಲ್ಕು ದಿನಗಳ ಮೇಳದಲ್ಲಿ 16 ಲಕ್ಷ ಮಂದಿ ಭಾಗಿ | 35 ಸಾವಿರಕ್ಕೂ ಅಧಿಕ ಜನರಿಂದ ರಿಯಾಯಿತಿ ದರದಲ್ಲಿ ಭೋಜನ ಸೇವನೆ

ಜಿಕೆವಿಕೆ ಕೃಷಿ ಮೇಳಕ್ಕೆ ಅದ್ದೂರಿ ತೆರೆ

ನ ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಜಿಕೆವಿಕೆಯಲ್ಲಿ ಆಯೋಜಿಸಲಾಗಿದ್ದ ನಾಲ್ಕು ದಿನಗಳ ಕೃಷಿ ಮೇಳಕ್ಕೆ ಅದ್ದೂರಿ ತೆರೆ ಬಿದ್ದಿದ್ದು, ನಾಲ್ಕು ದಿನಗಳ ಕಾಲ ನಡೆದ ಮೇಳಕ್ಕೆ 16 ಲಕ್ಷ ಮಂದಿ ಭೇಟಿ ನೀಡಿದ್ದಾರೆ.

ಮೇಳದ ಮೊದಲ ದಿನದಂದು 1.31 ಲಕ್ಷ ಭೇಟಿ ನೀಡಿದ್ದು, ಎರಡನೇ ದಿನ 5.48 ಲಕ್ಷ, ಮೂರನೇ ದಿನ 5.10 ಲಕ್ಷ ಹಾಗೂ ನಾಲ್ಕನೇ ದಿನ 3.78 ಲಕ್ಷ ಸೇರಿ ಒಟ್ಟಾರೆ 15.67 ಲಕ್ಷ ಮಂದಿ ಮೇಳಕ್ಕೆ ಆಗಮಿಸಿದ್ದು, 5.28 ಕೋಟಿ ರು. ವಹಿವಾಟು ನಡೆದಿದೆ. 35 ಸಾವಿರಕ್ಕೂ ಅಧಿಕ ಮಂದಿ ರಿಯಾಯಿತಿ ದರದಲ್ಲಿ ಭೋಜನ ಸೇವಿಸಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಈ ಬಾರಿ 'ಆಹಾರ, ಆರೋಗ್ಯ, ಆದಾಯಕ್ಕಾಗಿ ಸಿರಿಧಾನ್ಯಗಳು' ಘೋಷ ವ್ಯಾಕ್ಯದಲ್ಲಿ ನಡೆದ ಮೇಳದಲ್ಲಿ 650ಕ್ಕೂ ಅಧಿಕ ಮಳಿಗೆಗಳಲ್ಲಿ ಕೃಷಿ ಉತ್ಪನ್ನಗಳನ್ನು ಪ್ರದರ್ಶಿಸಲಾಗಿದ್ದು, ಸಿರಿಧಾನ್ಯ ಉತ್ಪನ್ನಗಳಿಗೆ ಆದ್ಯತೆ ನೀಡಲಾಯಿತು. ಕೃಷಿ, ತೋಟಗಾರಿಕೆ, ಜಲಾಯನ ಅಭಿವೃದ್ಧಿ, ಮೀನುಗಾರಿಕೆ, ಪಶುಸಂಗೋಪನೆ, ಮಾರುಕಟ್ಟೆ, ಅರಣ್ಯ ಸೇರಿ ಇತ್ಯಾದಿ ಮಾಹಿತಿಗಳನ್ನು ಒಂದೇ ಸೂರಿನಲ್ಲಿ ಒದಗಿಸಲಾಗಿದ್ದು, ಹೊಸ ತಳಿಗಳು, ಯಂತ್ರೋಪಕರಣಗಳ ಅವಿಷ್ಕಾರ, ಕೃಷಿ ನವೋದ್ಯಮಿಗಳ ನವೀನ ಶೋಧ ತಂತ್ರಜ್ಞಾನವನ್ನು ಪ್ರದರ್ಶಿಸಲಾಗಿದೆ. ರೈತರ ಕೃಷಿ ಸಮಸ್ಯೆಗಳಿಗೆ ಕೃಷಿ ವಿಜ್ಞಾನಿಗಳು,ತಜ್ಞರು, ಪ್ರಾಧ್ಯಾಪಕರು,ಸಂಶೋಧನಾ ವಿದ್ಯಾರ್ಥಿಗಳು ಪರಿಹಾರ ಒದಗಿಸಿದರು.



ಜಿಕೆವಿಕೆಯಲ್ಲಿ ನಡೆದ ಕೃಷಿ ಮೇಳದ ಅಂತಿಮ ದಿನ ಜಿಲ್ಲಾ ರೈತ ಪ್ರಶಸ್ತಿಯನ್ನು ರೈತರಿಗೆ ನೀಡಿ ಗೌರವಿಸಲಾಯಿತು. ಈ ವೇಳೆ ಆನಂದ ಗುರೂಜಿ ಸೇರಿದಂತೆ ಅನೇಕರಿದ್ದರು.



- ಮೇಳದಲ್ಲಿ 650ಕ್ಕೂ ಅಧಿಕ ಮಳಿಗೆಗಳಲ್ಲಿ ಕೃಷಿ ಉತ್ಪನ್ನಗಳ ಪ್ರದರ್ಶನ
- ಕೃಷಿ ಸಮಸ್ಯೆಗಳಿಗೆ ತಜ್ಞರಿಂದ ಸ್ಥಳದಲ್ಲೇ ಪರಿಹಾರ, ಮಾರ್ಗದರ್ಶನ

2 ಸಾವಿರ ಮಂದಿ ಸದ್ಬಳಕೆ

ಮೇಳದಲ್ಲಿ ಸ್ಥಾಪಿಸಿರುವ ಸಲಹಾ ಸೇವಾಗಳ ಕೇಂದ್ರವನ್ನು ಎರಡು ಸಾವಿರಕ್ಕೂ ಅಧಿಕ ಮಂದಿ ಸದ್ಬಳಕೆ ಮಾಡಿಕೊಂಡಿದ್ದು, ಬೇಸಾಯಶಾಸ್ತ, ಮಣ್ಣು ವಿಜ್ಞಾನ ಮತ್ತು ಕೃಷಿ ರಾಸಾಯನಶಾಸ್ತ, ತೋಟ ಗಾರಿಕೆ', ಅನುವಂಶಿಯತೆ ಮತ್ತು ಸಸ್ಯಗಳಶಾಸ್ತ, ಹರಿಸರ ವಿಜ್ಞಾನ ವಿಭಾಗ', ಬೆಳೆ ಶರೀರ ಕ್ರಿಯಾಶಾಸ್ತ, ಕೃಷಿ ಕೀಟಶಾಸ್ತ, ಸಸ್ಯ ರೋಗಶಾಸ್ತ, ಜೀನು ಕೃಷಿ', ರೇಷ್ಮೆ ಕೃಷಿ', ಪ್ಯಾಣಿ ವಿಜ್ಞಾನ ವಿಭಾಗ', ಆಹಾರ ವಿಜ್ಞಾನ ಮತ್ತು ಮಣ್ಣು', ಕೃಷಿ ಅರ್ಥಶಾಸ ವಿಭಾಗ' ಸ್ಟಾಲ್‌ಗಳಿಗೆ ರೈತರು ಭೇಟಿ ನೀಡಿ ಅಗತ್ಯ ಮಾಹಿತಿ ಪಡೆದರು. ಸಲಹಾ ಸೇವಾಗಳ ಕೂಟದಲ್ಲಿ ಪ್ರತಿಷ್ಠಾಪಿಸಿರುವ ಒಂದೊಂದು ಪ್ರಾತ್ಯಕ್ಷಿಕೆ ಕೇಂದ್ರಗಳಲ್ಲಿ ಕೃಷಿ ವಿಜ್ಞಾನಿಗಳು ರೈತರಿಗೆ ಉಪಯುಕ್ತ ಮಾಹಿತಿ ಒದಗಿಸಿದರು. ಹೆಚ್ಚಿನ ರೈತರು ಸಸ್ಯ ತಂತ್ರಜ್ಞಾನ, ಪ್ಯಾಣಿ ವಿಜ್ಞಾನ, ತೋಟಗಾರಿಕೆ, ಕೃಷಿ ವಿಜ್ಞಾನ ಸಂಬಂಧಿಸಿದ ಬಗ್ಗೆ ಹೆಚ್ಚಿನ ಮಾಹಿತಿ ಪಡೆದಿದ್ದು ಗಮನಾರ್ಹ.

ಮೇಳದಲ್ಲಿ ಪ್ರತಿಷ್ಠಾಪಿಸಿರುವ ಬೆಂಗಳೂರು ಕೃಷಿ ವಿವಿಯ ಮಳಿಗೆಗಳು ಹೆಚ್ಚು ಗಮನ ಸೆಳೆದವು. ಕೃಷಿ ವಿಭಾಗ, ಹವಾಮಾನ ಆಧಾರಿತ ಬೀಜ ಬಿತ್ತನೆ, ನೀರು ನಿರ್ವಹಣಾ ತಂತ್ರಜ್ಞಾನ ಕೇಂದ್ರ, ಜೋಳ, ಮಣ್ಣು, ಜಲಾಶಯನ, ಭತ್ತ, ಸಸ್ಯ ಸಂರಕ್ಷಣೆ, ರೇಷ್ಮೆ, ಎಣ್ಣೆ ಕಾಳು, ದ್ವಿದಳ ಧಾನ್ಯ, ಕೀಟಶಾಸ್ತ್ರ ವಾಣಿಜ್ಯ ಬೆಳೆ, ಕಳೆ ನಿರ್ವಹಣೆ, ಜೈವಿಕ ಗೊಬ್ಬರ, ಜೀಜ ತಾಂತ್ರಿಕತೆ, ಜೈವಿಕ ಇಂಧನ, ಕಬ್ಬು ಪ್ರಾತ್ಯಕ್ಷಿಕ ಕೇಂದ್ರಗಳಿಗೆ ಲಕ್ಷಾಂತರ ಮಂದಿ ಭೇಟಿ ನೀಡಿದರು. ಆಯಾ ಪ್ರಾತ್ಯಕ್ಷಿಕ ಕೇಂದ್ರಗಳಲ್ಲಿ ಬೆಳೆಗಳ ಕುರಿತು ಮಾಹಿತಿ ಹಾಕಲಾಗಿತ್ತು, ತಳಿಯ ಹೆಸರು, ಬೆಳೆಯುವ ದಿನಗಳ ಅವಧಿ, ಇಳುವರಿ, ಯಾವ ತಿಂಗಳಲ್ಲಿ ಬೀಜ ಬಿತ್ತನೆ ಮಾಡಬೇಕು, ಹಿಂಗಾರು, ಮುಂಗಾರು ಸಂದರ್ಭದಲ್ಲಿ ಯಾವ್ಯಾವ ಬೆಳೆ ಬೆಳೆಯಬೇಕು, ಹವಾಮಾನ ವೈಪರಿತ್ಯ ಸಮಸ್ಯೆಯಿಂದ ಬೆಳೆ ರಕ್ಷಿಸಿಕೊಳ್ಳುವುದು ಹೇಗೆ, ಕಳೆಯಿಂದ ಬೆಳೆ ರಕ್ಷಿಸಿಕೊಳ್ಳುವ ಬಗ್ಗೆ ತಜ್ಞರು ಮಾಹಿತಿ ನೀಡಿದರು.

21-11-2023
Viswavani Pg 11

15 ಲಕ್ಷ ಜನ ಭೇಟಿ, 5.3 ಕೋಟಿ ವಹಿವಾಟು

ನಾಲ್ಕು ದಿನಗಳ ಜಿಕೆವಿಕೆ ಕೃಷಿ ಮೇಳಕ್ಕೆ ಅದ್ದೂರಿ ತೆರೆ

ಕೆಲಸಕ್ಕೆ ರಜೆ ಹಾಕಿ ಗ್ರಾಮೀಣ ಸೊಗಡು ಸವಿದ ನಗರದ ಜನ

ಸ್ವ-ಸಹಾಯ ಸಂಘಗಳ ಉತ್ಪನ್ನ, ಸಿರಿಧಾನ್ಯಗಳ ಖರೀದಿ ಭರಾಟೆ

ಬೆಂಗಳೂರು: ನಾಲ್ಕು ದಿನಗಳಲ್ಲಿ ಸುಮಾರು 15.67 ಲಕ್ಷ ಜನರ ಭೇಟಿ, 5.28 ಕೋಟಿ ರೂ. ವಹಿವಾಟು, ವಿಜ್ಞಾನಿಗಳಿಂದ ಸಲಹೆ ಪಡೆದ ಸಾವಿರಾರು ರೈತರು. ಗ್ರಾಮೀಣ ಕಲೆ-ಸಂಸ್ಕೃತಿಗೆ ವೇದಿಕೆಯಾದ ರೈತರ ಸಂತೆ.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ)ದಲ್ಲಿ ಹಮ್ಮಿಕೊಂಡಿದ್ದ 'ಕೃಷಿ ಮೇಳ'ದ ಪ್ರಮುಖಾಂಶಗಳವು. ಇದರೊಂದಿಗೆ ನಾಲ್ಕು ದಿನಗಳ ಮೇಳಕ್ಕೆ ತೋಮವಾರ ಅದ್ದೂರಿ ತೆರೆಬಿದ್ದಿತು.

ಮೊದಲ ದಿನ ಕೃಷಿ ಮೇಳ ಕುಸು ಮಂಕಾಗಿತ್ತು. ನಂತರದ ಎರಡು ದಿನಗಳು ಬೆಂಗಳೂರು ಸುತ್ತಲಿನ ಜನ ಆಕ್ಷರಶಃ ಮುಗಿಬಿದ್ದರು. ಇದರಿಂದ ಜಾತ್ರೆಯ ಸ್ವರೂಪ ಪಡೆದಿತ್ತು. ಶನಿವಾರ ಮತ್ತು ಭಾನುವಾರ ಎರಡೇ ದಿನಗಳಲ್ಲಿ ಅಂದಾಜು 10 ಲಕ್ಷಕ್ಕೂ ಅಧಿಕ ಜನ ಭೇಟಿ ನೀಡಿದರು. ಯುವ ರೈತರು, ರೈತ ಮಹಿಳೆಯರು, ಶಾಲಾ ವಿದ್ಯಾರ್ಥಿಗಳು, ಪ್ರೇಮಿಗಳು ನೇರಿದಂತೆ ಎಲ್ಲ ವರ್ಗದ ಜನಕ್ಕೆ ರೈತರ ಸಂತೆ ಸಾಕ್ಷಿಯಾಯಿತು.

ವಿವಿಧ ವಿಭಾಗಗಳು ಸೇರಿ 650ಕ್ಕೂ ಹೆಚ್ಚು ಮಳಿಗೆಗಳನ್ನು ತೆರೆಯಲಾಗಿತ್ತು. ಅಲ್ಲಿ ಕೊನೆಯ ದಿನದ ಸಂಜೆವರೆಗೆ ಕೋಟ್ಯಂತರ ರೂ. ವಹಿವಾಟು ನಡೆಯಿತು. ಈ ವೈಕೆ ಯಂತ್ರೋಪಕರಣ, ಸಿರಿಧಾನ್ಯ, ಸಾವಯವ, ತೋಟಗಾರಿಕೆ ನೇರಿದಂತೆ ಬೆಂಗಳೂರು ಕೃಷಿ ವಿವಿಯ ನೂರಾರು ಮಳಿಗೆಗಳವ್ವು. ಆದರಲ್ಲಿ ಕೂಡ ಲಕ್ಷಾಂತರ ವಹಿವಾಟು ನಡೆದಿದೆ. ಒಟ್ಟಾರೆ ವಹಿವಾಟಿನಲ್ಲಿ ಯಂತ್ರೋಪಕರಣಗಳು, ಸ್ವ- ಸಹಾಯ ಸಂಘಗಳಲ್ಲಿ ಉತ್ಪನ್ನಗಳು, ಸಿರಿಧಾನ್ಯ ಗಳ ಖರೀದಿ ಭರಾಟೆ ಹೆಚ್ಚು. ಅಷ್ಟೇ ಅಲ್ಲ ಸಾವಿರಾರು ಜನರು ಯಂತ್ರೋಪಕರಣಗಳ ಖರೀದಿಸಲು ಮುಂಗಡ ಹಣ ಪಾವತಿಸಿ, ವೀಸಾ ದಾಖಲೆ ಸಿದ್ಧಾರೆ ಎಂದು ವಿಶ್ವವಿದ್ಯಾಲಯದ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಸೋಮವಾರ ಕೆಲಸದ ದಿನವಾಗಿದ್ದರಿಂದ ಭೇಟಿ ನೀಡುವವರ ಸಂಖ್ಯೆ ತುಸು ಕಡಿಮೆ ಇತ್ತು. ಆದರೆ, ಭಾನುವಾರ ವಿಶ್ವಕಪ್ ಕ್ರಿಕೆಟ್ ಫೈನಲ್ ಪಂದ್ಯಾವಳಿ ನಡು ವೆಯೂ ಜನಸಾಗರ ಹರಿದು ಬಂದಿತು. ಪಂದ್ಯದ ಹಿನ್ನೆಲೆಯಲ್ಲಿ ಬೆಳಿಗ್ಗೆಯೇ ಆಗಮಿಸಿ, ರಜಾ-ಮಜಾ ಅನುಭವಿಸಿದರು. ಇನ್ನು ಪಂದ್ಯದ ಹಿನ್ನೆಲೆ ಮೇಲ್ನೋಟುವ ಯಂತೂ ಪೀಕ್ ಅವರ್‌ನಲ್ಲಿ ವಾಹನಗಳಿಂದ ತುಂಬಿತುಳುಕುತ್ತಿತ್ತು.



ಗ್ರಾಮೀಣ ಕಲೆಗಳಿಗೂ ಆದಾಯ

ಮೇಳದಲ್ಲಿ ಗ್ರಾಮೀಣ ಕಲೆಗಳಿಗೂ ವೇದಿಕೆ ಕಲ್ಪಿಸಲಾಗಿತ್ತು. ಕುಂಬಾರ, ಕಮ್ಮಾರರು ನೀಡುವ ಪ್ರಾತ್ಯಕ್ಷಿಕೆಗೆ ಜನ ಮನಸೋತರು. ಕೆಲ ಮಕ್ಕಳಿಗೆ ಕೈಹಿಡಿದು ಮಡಕೆ ತಯಾರಿಕೆ ಕಲಿಸುತ್ತಿರುವುದು ಕಂಡುಬಂತು. ಮೇಳದಲ್ಲಿನ ಪ್ರಾತ್ಯಕ್ಷಿಕೆಯಿಂದ ಕುಂಬಾರರಿಗೆ ನಗರದಲ್ಲಿ ಅವಕಾಶ ಬಾಗಿಲು ತೆರೆದುಕೊಂಡಿದೆ. ನಾಲ್ಕು ದಿನಗಳು ಮೇಳದಲ್ಲಿ ಕುಂಬಾರಿಕೆ ಪ್ರದರ್ಶನದಿಂದ ನಗರದ ಹಟ್ಟಿಕಾಪಿ, ಬರಿಯಾನಿ ಮಡಕೆ, ಅಲಂಕಾರಿಕ ಹೂವುಗಳ ತಯಾರಕರು, ಬಸ್ ಟ್ರೀಂ ವ್ಯಾಪಾರಿಗಳು, ಶಾಲೆಗಳಲ್ಲಿ ತರಬೇತಿ ನೀಡುವುದು ಸೇರಿದಂತೆ ಹಲವು ಬೇಡಿಕೆಗಳು ಬಂದಿವೆ ಎಂದು ಮಡಕೆ ತಯಾರಿಕೆಯಲ್ಲಿ ತೊಡಗಿದ್ದ ವ್ಯಕ್ತಿಯೊಬ್ಬರು ತಿಳಿಸಿದರು.

ನಾಲ್ಕು ದಿನಗಳ ಕೃಷಿ ಮೇಳದ ಅಂಕಿ-ಅಂಶಗಳು

ದಿನಾಂಕ	ಭೇಟಿ ನೀಡಿದವರು (ಲಕ್ಷಗಳಲ್ಲಿ)	ವಹಿವಾಟು (ಕೋಟಿ ರೂ.ಗಳಲ್ಲಿ)	ರಿಯಾಯ್ತಿ ದರದಲ್ಲಿ ಊಟ ಸವಿದವರು
ನ. 17	1.31	0.8	8,000
ನ. 18	5.48	1.38	9,600
ನ. 19	5.10	1.65	9,300
ನ. 20	3.78	1.45	8,500
ಒಟ್ಟಾರೆ	15.67	5.28	35,400

ಮೇಕ್ ಆ್ಯಂಡ್ ಟೇಕ್ ಕೇಕ್‌ಗೆ ಭಾರಿ ಸ್ಪಂದನೆ

ಬೆಂಗಳೂರು: ಮಹಿಳೆಯರನ್ನು ಆರ್ಥಿಕ ಸ್ವಾವಲಂಬನೆಯಾಗಿಸುವ ಜತೆ ಜತೆಗೆ ಹೋಮ್ ಬೇಕಿಂಗ್‌ಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಕೃಷಿ ಮೇಳದಲ್ಲಿ ಆಯೋಜಿಸಿದ್ದ 'ಆನ್ ಸ್ಟಾಟ್ ದು ಆ್ಯಂಡ್ ಟೇಕ್' ಬೇಕರಿ ಆಹಾರೋತ್ಪನ್ನ ತಯಾರಿಕೆಗೆ ಭರ್ಜರಿ ರೆಸ್ಪಾನ್ಸ್ ಸಿಕ್ಕಿದೆ.

- ವಿದ್ಯಾರ್ಥಿನಿಯರ, ಗೃಹಿಣಿಯರ ಕೈಯಲ್ಲಿ ಅರಳಿದ ಪಿಜ್ಜಾ, ಕೇಕ್, ಕುಕ್ಕೀಸ್
- ಕೃಷಿ ಮೇಳದಲ್ಲಿ 'ಆನ್ ಸ್ಟಾಟ್ ದು ಆಂಡ್ ಟೇಕ್'ಗೆ ಭರ್ಜರಿ ರೆಸ್ಪಾನ್ಸ್

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನ ಸಂಸ್ಥೆಯು ತೆರೆದಿದ್ದ ಮಳಿಗೆಗೆ ನಾಲ್ಕು ದಿನಗಳಲ್ಲಿ 1,600ಕ್ಕೂ ಅಧಿಕ ಮಂದಿ ಬೇಕರಿ ಉತ್ಪನ್ನಗಳ ತಯಾರಿಕೆಯಲ್ಲಿ ಭಾಗವಹಿಸಿದರು. ಅದರಲ್ಲಿ ಶೇ. 90ರಷ್ಟು ಮಂದಿ ಹೆಣ್ಣುಮಕ್ಕಳೇ ಆಗಿದ್ದಾರೆ. ಅವರಲ್ಲಿ ಶೇ.60ರಷ್ಟು ಗೃಹಿಣಿಯರು ಹಾಗೂ ಪ್ರೌಢಶಾಲಾ ವಿದ್ಯಾರ್ಥಿನಿಯರು ಆತ್ಮಥಿಕ ಸಂಸ್ಥೆಯಲ್ಲಿ ಪಾಲ್ಗೊಂಡು ತರಬೇತಿ ಪಡೆದುಕೊಂಡರು.

ಉತ್ಪನ್ನ	ಜನರು
ಪಿಜ್ಜಾ	500
ಕೇಕ್	350
ಕುಕ್ಕೀಸ್	300
ಕೇಕ್ ಅಲಂಕಾರ	400

ತರಬೇತಿ ಪಡೆಯುತ್ತಿರುವ ಕೋರ್ಸ್‌ನ ವಿದ್ಯಾರ್ಥಿಗಳು ಕೇಕ್, ಕಪ್ ಕೇಕ್, ಪಿಜ್ಜಾ ಕೇಕ್ ಅಲಂಕಾರ, ಬಿಸ್ಕತ್ತುಗಳ ತಯಾರಿಕೆಗೆ ಆಗಮಿಸಿರುವ ಮಾರ್ಗದರ್ಶನ ನೀಡಿದರು. ಯಾವುದಕ್ಕೆ ಎಷ್ಟು ಪ್ರಮಾಣದಲ್ಲಿ ಹಾಕಬೇಕು ಎನ್ನುವುದನ್ನು ಹಂತ-ಹಂತವಾಗಿ ವಿವರಿಸಿದರು. ಈ ವೇಳೆ ತರಬೇತಿ ಪಡೆದು ಪಿಜ್ಜಾ ಕೇಕ್ ತಯಾರಿಸಿ, ಆಲ್ಲಿಯೇ ಸೇವಿಸಿ ಸಂಭ್ರಮಿಸಿದರು.

ಕೋರ್ಸ್ ಸೇರಲು ಆಸಕ್ತಿ: ಸ್ವಯಂ ಉದ್ಯೋಗ ಕೈಗೊಳ್ಳುವವರಿಗೆ ತರಬೇತಿ ನೀಡಲು ಜಿಕೆವಿಕೆಯಲ್ಲಿ ತರಬೇತಿ ನೀಡಲಾಗುತ್ತಿದೆ. ನಾಲ್ಕು ವಾರಗಳ ತರಬೇತಿ ಕೋರ್ಸ್ ಇದಾಗಿದೆ. ಈ ಕೋರ್ಸ್‌ಕುರುತು ಕೃಷಿ ಮೇಳದಲ್ಲಿ ಎರಡು ಸಾವಿರಕ್ಕೂ ಅಧಿಕ ಮಂದಿ ಮಾಹಿತಿ ಪಡೆದುಕೊಂಡು ಕೋರ್ಸ್‌ಗೆ ಸೇರಲು ಆಸಕ್ತಿ ತೋರಿಸಿದ್ದಾರೆ ಎಂದು ಘಟಕದ ತರಬೇತುದಾರರು ತಿಳಿಸಿದರು.


ಕೃಷಿ ಮೇಳದಲ್ಲಿ ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನ ಸಂಸ್ಥೆಯು ಸೋಮವಾರ ತೆರೆದಿದ್ದ ಮಳಿಗೆಯೆಲ್ಲಿ ಯುವತಿಯರು ಹಾಗೂ ಗೃಹಿಣಿಯರು ಖರೀದಿ ಸವಿದು ಸಂಭ್ರಮಿಸಿದರು.

ಸಾಮಾನ್ಯವಾಗಿ ಬೇಕರಿ ಉತ್ಪನ್ನಗಳ ತರಬೇತಿಗೆ ಸಾಕಷ್ಟು ಹಣ ವ್ಯಯಿಸಬೇಕಾಗುತ್ತದೆ. ಈ ಕೇಂದ್ರದಲ್ಲಿ ಕನಿಷ್ಠ ಶುಲ್ಕದಲ್ಲಿ ಪ್ರಮಾಣಿಕೃತ ತರಬೇತಿ ಪಡೆಯಬಹುದು. ರಜಾ ಅವಧಿಯಲ್ಲಿ ತರಬೇತಿ ಪಡೆದು, ಹೋಮ್ ಬೇಕಿಂಗ್ ಮಾಡುವ ಚಿಂತನೆ ಇದೆ.
• ಉಷಾ ಎಸ್.ವಿ., ವಿದ್ಯಾರ್ಥಿನಿ

ಮಕ್ಕಳಿಗಾಗಿ ನಿತ್ಯ ಒಂದಲ್ಲ ಒಂದು ವಿಶೇಷ ತಿಂಡಿ ಮಾಡಬೇಕಾಗುತ್ತದೆ. ನಿತ್ಯ ಪಿಜ್ಜಾ, ಕೇಕ್‌ಗೆ ನೂರಾರು ರೂ. ವ್ಯಯಿಸುವುದು ಖರೀದಿಸುವುದು ಸಾಧ್ಯವಾಗದ ಮಾತು. ಹೊರಗಡೆ ತಿಂಡಿ ಆರೋಗ್ಯದ ದೃಷ್ಟಿಯಿಂದ ಉತ್ತಮವಲ್ಲ. ಹೀಗಾಗಿ ಕೃಷಿ ಮೇಳದಲ್ಲಿ ಪಿಜ್ಜಾ, ಬಿಸ್ಕತ್ತು ತರಬೇತಿ ಪಡೆದು, ತಯಾರಿ ಮಾಡಿದ್ದೇನೆ. ಮಕ್ಕಳು ರುಚಿ ನೋಡಿ ಸಂಭ್ರಮಿಸಿದರು.
• ಭಾಗ್ಯಶ್ರೀ, ಗೃಹಿಣಿ

ಕೃಷಿ ಮೇಳದಲ್ಲಿ 'ಆನ್ ಸ್ಟಾಟ್ ದು ಆಂಡ್ ಟೇಕ್'ಗೆ ಉತ್ತಮ ರೆಸ್ಪಾನ್ಸ್ ಸಿಕ್ಕಿದೆ. ಅಧಿಕ ಸಂಖ್ಯೆಯಲ್ಲಿ ಪಿಜ್ಜಾ ಮಾಡಿ ಗ್ರಾಹಕರು ಸಂಭ್ರಮಿಸಿದರು. ಗೃಹಿಣಿಯರು, ಯುವಜನರು ಮುಂದೆ ಬಂದು ಕೋರ್ಸ್ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ.
• ಡಾ.ಸವಿತಾ ಎಂ., ಸಂಯೋಜಕರು, ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನ ಸಂಸ್ಥೆ, ಜಿಕೆವಿಕೆ.

21-11-2023
Udayavani Pg 07

21-11-2023
Ind Exp Pg 04

Krishi Mela draws 15.67 lakh visitors

Bengaluru: Krishi Mela-2023, held at GKVK, concluded on Monday. According to officials, 15.67 lakh people visited the fair, which saw transactions of over Rs 5.28 crore. Around 35,400 people enjoyed food at the fair, besides 625 stalls and thousands of exhibits on display. The fair was held under the motto 'Millets for Food, Health, Income', where information on agriculture, horticulture, fisheries, animal husbandry, marketing, forestry, etc. was provided at one place.

12 ಲಕ್ಷ ಮಂದಿ ವೀಕ್ಷಣೆ | ಕೊನೆ ದಿನ ಊಟ ಸೇವಿಸಿದ 8500 ಮಂದಿ | ಕೃಷಿ ತಜ್ಞರಿಂದ ಮಾಹಿತಿ ಪಡೆದ ರೈತರು

ನಾಲ್ಕು ದಿನಗಳ ಕೃಷಿ ಮೇಳಕ್ಕೆ ತೆರೆ

ಬೆಂಗಳೂರು: ಕಳೆದ ನಾಲ್ಕು ದಿನಗಳ ಕಾಲ (ನ.17ರಿಂದ 20ರವರೆಗೆ) ಜಿಕೆವಿಕೆ ಆವರಣದಲ್ಲಿ ನಡೆದ ಕೃಷಿ ಮೇಳ ಸೋಮವಾರ ಅದ್ಧೂರಿಯಾಗಿ ಮುಕ್ತಾಯವಾಗಿದೆ.

ಈ ನಾಲ್ಕು ದಿನಗಳ ಕಾಲ ರೈತರು, ಸಾರ್ವಜನಿಕರು, ವಿದ್ಯಾರ್ಥಿಗಳು ಅಪಾರ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ತಜ್ಞರಿಂದ ಅಗತ್ಯ ಮಾಹಿತಿ ಪಡೆದುಕೊಂಡರು. ದಕ್ಷಿಣ ಕರ್ನಾಟಕದ 10 ಜಿಲ್ಲೆಗಳಿಂದ 15 ತಂಡಗಳಲ್ಲಿ 900 ದೇಸಿ ವಿದ್ಯಾರ್ಥಿಗಳು ಭಾಗವಹಿಸಿ ಸಮಾರೋಪ ಸಮಾರಂಭಕ್ಕೆ ಮೆರಗು ನೀಡಿದರು. ಕೃಷಿ ಮೇಳದ ಕೊನೆ ದಿನ 3.78 ಲಕ್ಷ ರೈತರು, ಸಾರ್ವಜನಿಕರು ಭಾಗವಹಿಸಿದ್ದರು. 8,500 ಜನ ಕೃಷಿ ವಿವಿಯ ರಿಯಾಯಿತಿ ದರದ ಭೋಜನಾಲಯದಲ್ಲಿ ಮಧ್ಯಾಹ್ನದ ಊಟ ಮಾಡುವ ಮೂಲಕ 1.45 ಕೋಟಿಯ ವಹಿವಾಟಾಗಿದೆ.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲಾಮಟ್ಟದ ಪ್ರಗತಿಪರ ರೈತ ಹಾಗೂ ರೈತ ಮಹಿಳಾ ಪ್ರಶಸ್ತಿಗಳು ಮತ್ತು ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ತಾಲೂಕು ಮಟ್ಟದ ಅತ್ಯುತ್ತಮ ಯುವ ರೈತ ಹಾಗೂ ರೈತ ಮಹಿಳಾ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.



ಯಲಹಂಕದ ಜಿಕೆವಿಕೆ ಆವರಣದಲ್ಲಿ ನಡೆದ ಕೃಷಿ ಮೇಳದಲ್ಲಿ ರೈತ ಮಹಿಳಾ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.



ಈ ಕೃಷಿ ಮೇಳಕ್ಕೆ ಬಂದು ಹಲವು ವಿಚಾರಗಳನ್ನು ತಿಳಿದುಕೊಂಡೆ. ಕೃಷಿ ವಿಜ್ಞಾನಿಗಳು ಒಳ್ಳೆಯ ಮಾಹಿತಿ ನೀಡಿದರು. ಕಡಿಮೆ ಭೂಮಿಯಲ್ಲಿ ಹೆಚ್ಚು ಇಳುವರಿ ಪಡೆಯುವ ಬಗ್ಗೆ ತಿಳಿಸಿಕೊಟ್ಟರು.

■ ಚಿನ್ನಸ್ವಾಮಿ | ಮಂಡ್ಯ ರೈತ



ನನಗೆ ಕೃಷಿ ಮೇಳದಲ್ಲಿ ಇಷ್ಟವಾದದ್ದು ಎಂದರೆ ಅದು ಬಾಕ್ಸ್‌ಗಳಲ್ಲಿ ಆದು-ಕುರಿ, ಕೋಳಿ ಸಾಕಾಣಿಕೆ ಮಾಡಬಹುದು ಎಂಬುದು. ಅತಿ ಸುಲಭವಾಗಿ ಸೈಕಲ್ ಚಕ್ರದಲ್ಲಿ ಕಳೆ ಕೀಳುವುದನ್ನು ನೋಡಿ ಅಚ್ಚರಿ ಪಟ್ಟೆ.

■ ನಾಗಭೂಷಣ್ | ಪಾವಗಡ ರೈತ

ನಾಲ್ಕು ದಿನಗಳ ವಹಿವಾಟು (ನ.17ರಿಂದ 20)

ದಿನ	ಭಾಗವಹಿಸಿದವರು (ಲಕ್ಷ)	ವಹಿವಾಟು (ಕೋಟಿ)	ಊಟ ಸವಿದವರು
ಮೊದಲ ದಿನ	1.31	0.8	8.0 (ಸಾವಿರ)
ಎರಡನೇ ದಿನ	5.48	1.38	9.6 (ಸಾವಿರ)
ಮೂರನೇ ದಿನ	5.10	1.65	9.3 (ಸಾವಿರ)
ನಾಲ್ಕನೇ ದಿನ	3.78	1.45	8.5 (ಸಾವಿರ)
ಒಟ್ಟು	15.67	5.28	35.4 (ಸಾವಿರ)

ಮುತ್ತಿನ ಕೃಷಿ

ಜಾಗತಿಕ ಮಟ್ಟದಲ್ಲಿ ಮಿಂಚುವ ಮುತ್ತಿನ ಹಾರಕ್ಕೆ ಎಲ್ಲಿಲ್ಲದ ಬೇಡಿಕೆ ಇದೆ. ಆಭರಣಗಳ ತಯಾರಿಕೆಯಲ್ಲಿ ಹೇರಳವಾಗಿ ಮುತ್ತುಗಳನ್ನು ಬಳಸಲಾಗುತ್ತದೆ. ಈ ಕೃಷಿಯನ್ನು ಮನೆಯ ಡ್ರಮ್, ಟ್ಯಾಂಕ್, ಸಿಮೆಂಟ್‌ನಿಂದ ತಯಾರಿಸಿದ ತೊಟ್ಟಿಗಳಲ್ಲಿ ಮಾಡಬಹುದು. ಕಪ್ಪೆ ಚಿಪ್ಪನ್ನು ಟ್ಯಾಂಕ್‌ನಲ್ಲಿ ಹಾಕಬೇಕಾಗುತ್ತದೆ. ನಂತರ ಪ್ಲಾಂಕ್ಟನ್ ಸಸ್ಯ ಬೆಳೆಯುವಂತೆ ಮಾಡಬೇಕು. ಕೆಲ ದಿನಗಳ ಬಳಿಕ ನೀರಿಗೆ ಮೆಂಥಾಲ್ ಪುಡಿ ಬೆರೆಸಿದಾಗ ಕಪ್ಪೆ ಚಿಪ್ಪುಗಳು ಅರೆಪ್ರಜ್ಞಾವಸ್ಥೆಗೆ ಹೋಗುತ್ತವೆ. ಈ ವೇಳೆ, ದಂತ ಚಿಕಿತ್ಸೆಗೆ ಉಪಯೋಗಿಸುವ ಕೋಲ್ಡ್ ಕ್ಯೂರಿಂಗ್ ಅಕ್ರೈಲಿಕ್ ಪುಡಿ ಮತ್ತು ದ್ರಾವಣವನ್ನು ಉಪಯೋಗಿಸಿ ಅಚ್ಚುಗಳನ್ನು ಮಾಡಿಕೊಳ್ಳಬೇಕು. ಅದನ್ನು ಕಪ್ಪೆ ಚಿಪ್ಪಿನೊಳಗೆ ತೂರಿಸಬೇಕು. ಆ ನಂತರ ಆ್ಯಂಟಿಬಯೋಟಿಕ್ ದ್ರಾವಣ ಸೇರಿಸಬೇಕು.

ಕೃಷಿ ವಲಯಕ್ಕೆ ಬೇಡಿಕೆ

ಮುಂದಿನ ದಿನಗಳಲ್ಲಿ ಕೃಷಿ ವಲಯಕ್ಕೆ ಬೇಡಿಕೆ ಹೆಚ್ಚಾಗಲಿದೆ. ಈ ನಿಟ್ಟಿನಲ್ಲಿ ರೈತರು ಹೆಮ್ಮೆಯಿಂದ ಕೃಷಿಯನ್ನು ಕೈಗೊಳ್ಳಬೇಕು. ಅಂತಾರಾಷ್ಟ್ರೀಯ ಮಟ್ಟದಲ್ಲಿ ರೈತರು ಇತರರೊಂದಿಗೆ ಸ್ಪರ್ಧೆ ಎದುರಿಸಲು ಸಂಘಟಿತರಾಗಬೇಕು. ಆದರೆ ಇಂದಿನ ದಿನಗಳಲ್ಲಿ ಕೆಲವೊಮ್ಮೆ ತಾವು ಬೆಳೆದ ಬೆಳೆಗೆ ಬೆಲೆ ಸಿಗದೇ ನಷ್ಟ ಅನುಭವಿಸಿದ್ದು ಉಂಟು. ಇದರಿಂದಾಗಿ ಬೆಳೆಗಾರರ ಸಂಘ, ಬೆಳೆಗಾರರ ಸಂಸ್ಥೆ ಮತ್ತು ಸ್ವಸಹಾಯ ಸಂಘ, ಸಹಕಾರಿ ಸಂಘಗಳ ಮೂಲಕ ಸಂಘಟಿತರಾಗಿ ಮಾರಾಟ ಮಾಡಲು ದೃಢವಾದ ಹೆಜ್ಜೆ ಇಡುವುದು ಅನಿವಾರ್ಯವಾಗಿದೆ

■ ಪಿ.ಜಿ.ಚಂಗಪ್ಪ | ಕೃಷಿ ವಿವಿ ಬಿಲ್ಲಾಂತ ಕುಲಪತಿ



ಜನರನ್ನು ಸೆಳೆದ ಸಿರಿಧಾನ್ಯ ಮೇಳ

ಈ ಬಾರಿಯೂ ಸಹ ಕೃಷಿ ಮೇಳದಲ್ಲಿ ಸಿರಿಧಾನ್ಯ ಮಳಿಗೆಗಳನ್ನು ಸ್ಥಾಪಿಸಲಾಗಿತ್ತು. ಸ್ವಸಹಾಯ ಸಂಘಗಳು ಸಿರಿಧಾನ್ಯಗಳಿಂದ ತಯಾರಿಸಿರುವ ಇಡ್ಲಿ, ಚಿಕ್ಕುಲಿ, ಪಿಜ್ಜಾ, ಕೇಕ್, ಕುಕ್ಕಿಸ್, ಉಂಡೆ ಸೇರಿದಂತೆ ನಾನಾ ಪದಾರ್ಥಗಳು ಆಹಾರ ಪ್ರೇಮಿಗಳನ್ನು ಆಕರ್ಷಿಸಿದವು. ರೈತರು ಬೆಳೆದ ಸಿರಿಧಾನ್ಯ ಬೆಳೆಗೆ ಮಾರುಕಟ್ಟೆ ಕಲ್ಪಿಸಲು ಹಾಗೂ ಆರೋಗ್ಯಕರ ಜೀವನ ಶೈಲಿಗೆ ಸಿರಿಧಾನ್ಯಗಳ ಮಹತ್ವ ತಿಳಿಸುವ ಉದ್ದೇಶದಿಂದ ಕೃಷಿ ಮೇಳದಲ್ಲಿ ಸ್ಥಾಪಿಸಿದ್ದ ಸಿರಿಧಾನ್ಯ ಆಹಾರ ಮೇಳ ಎಲ್ಲರ ಮೆಚ್ಚುಗೆ ಗಳಿಸಿತು.

ಆಲ್‌ಮೇಲ್ ಟಿಲಾಪಿಯಾ ಮೀನು

ಫಾಟಲ, ರೋಹು, ಮೃಗಾಲ್ ಮೀನುಗಳ ಬಗ್ಗೆ ಗೊತ್ತಿದೆ. ಆದರೆ ಆಲ್ ಮೇಲ್ ಟಿಲಾಪಿಯಾ ಎನ್ನುವ ಹೊಸ ಬಗೆಯ ಮೀನುಗಳಿಗೆ ಮಾರುಕಟ್ಟೆಯಲ್ಲಿ ಸಿಗುತ್ತಿರುವ ಮನ್ನಣೆಯನ್ನು ಮೀನು ಸಾಕಣೆದಾರರಿಗೆ ಮನವರಿಕೆ ಮಾಡಿಕೊಡಲಾಯಿತು.

21-11-2023
S-akaranataka Pg 02

Over 15 lakh people visit Krishi Mela

BENGALURU, DHNS

As many as 15.67 lakh people visited the four-day annual farm fair at the University of Agricultural Sciences (UAS) here, bringing in a revenue of Rs 5.28 crore.

On the concluding day, 3.78 people visited the Krishi Mela, which took place at the Gandhi Krishi Vigyana Kendra in Jakkur from November 17 to 20.

Speaking at the valedictory programme, astrologer and Vastu expert Maharshi Anand Guruji praised the Krishi Mela for providing a platform to farmers, who are responsible for providing food security to the nation. He said it was noteworthy that young educated people were taking up farming.

The university gave away 49 awards for best exhibition stalls in 16 categories — nursery; farm produce institutes; self-help groups; farm implements (seed division); fertilisers and medicines; organic farming; millets; agricultural college hostel stalls; banks and publishers; state/central government/ICAR/agricultural universities; animal husbandry/dairy farming/fisheries/poultry farming/veterinary medicine; farm engineering irrigation implements; farm engineering high-tech pharm equipment; farm equipment displayed in open spaces; tractor/solar equipment displayed in open spaces, and Krishi Mela special awards.

UAS Vice-Chancellor S V Suresh and other dignitaries attended the fair, according to a statement from UAS Special Information Specialist Dr K Shivaramu.



Students obtain information on farm equipment displayed at the Krishi Mela 2023 organised on Gandhi Krishi Vigyan Kendra premises in Bengaluru on Monday. DH PHOTOS/RANJU P

21-11-2023
Dec Hrd Pg 04

ವಸ್ತು ಪ್ರದರ್ಶನದ ಅತ್ಯುತ್ತಮ ಮಳಿಗೆಗಳಿಗೂ ಪ್ರಶಸ್ತಿ : ವಿವಿ ಕುಲಪತಿ

ಪ್ರಗತಿಪರ ರೈತ, ರೈತಮಹಿಳೆಯರಿಗೆ ಪ್ರಶಸ್ತಿ

ಬೆಂಗಳೂರು: ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲಾ ಮತ್ತು ತಾಲೂಕು ಮಟ್ಟದ ಪ್ರಗತಿಪರ ರೈತ, ರೈತ ಮಹಿಳಾ ಪ್ರಶಸ್ತಿಗಳ ಪ್ರಧಾನ ಹಾಗೂ ವಸ್ತು ಪ್ರದರ್ಶನದ ಅತ್ಯುತ್ತಮ ಮಳಿಗೆಗಳಿಗೂ ಪ್ರಶಸ್ತಿ ನೀಡಲಾಗಿದೆ ಎಂದು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಸ್.ವಿ.ಸುರೇಶ್ ತಿಳಿಸಿದರು.

ಕೃಷಿವಿಶ್ವವಿದ್ಯಾನಿಲಯದಲ್ಲಿಆಯೋಜಿಸಲಾಗಿದ್ದ ಬೆಂಗಳೂರಿನ ಕೃಷಿಮೇಳ - 2023ರ ಸಮಾರೋಪ ಮತ್ತು ಪ್ರಶಸ್ತಿ ಪ್ರದಾನಸಮಾರಂಭದಲ್ಲಿ ಭಾಗವಹಿಸಿ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ದಕ್ಷಿಣ ಕರ್ನಾಟಕದ 10 ಜಿಲ್ಲೆಗಳಿಂದ 15 ತಂಡಗಳಲ್ಲಿ 900 ದೇಸಿ ವಿದ್ಯಾರ್ಥಿಗಳು ಭಾಗವಹಿಸಿ ಸಮಾರೋಪ ಸಮಾರಂಭಕ್ಕೆ ಮೆರಗು ನೀಡಿದ್ದಾರೆ. ಕೃಷಿಮೇಳ - 2023ರ ಕೊನೆಯ ದಿನದಂದು 3.78 ಲಕ್ಷ ರೈತರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು, 8,500 ಜನ ಕೃಷಿ ವಿಶ್ವವಿದ್ಯಾನಿಲಯದ ರಿಯಾಯಿತಿ ದರದ ಭೋಜನಾಲಯದಲ್ಲಿ ಮಧ್ಯಾಹ್ನದ ಊಟ ಮಾಡಿದರು ಹಾಗೂ 1.45ಕೋಟಿಯ ವಹಿವಾಟಾಗಿದೆ ಎಂದು ತಿಳಿಸಿದರು.





ಕಾರ್ಯಕ್ರಮದಲ್ಲಿ ಮಹರ್ಷಿ ಆನಂದ್ ಗುರೂಜಿ ಮಾತನಾಡಿ, ಕೃಷಿ ವಿಜ್ಞಾನಿಗಳ, ರೈತರ ಮತ್ತು ಉದ್ದಿಮೆದಾರರ ಈ ವೇದಿಕೆಯಲ್ಲಿ ಭಾಗವಹಿಸುತ್ತಿರುವುದು ನನ್ನ ಪುಣ್ಯ. ದೇಶಕ್ಕೆ ಅನ್ನ ನೀಡುತ್ತಿರುವ ಅನ್ನದಾತರನ್ನು ಸನ್ಮಾನಿಸುತ್ತಿರುವುದು ಪುಣ್ಯದ ಕೆಲಸ. ಯುವ ಕೃಷಿಕರ ಸಾಧನೆಗಳನ್ನು ಗುರುತಿಸಿ, ವಿಶೇಷ ಸ್ಥಾನ-ಮಾನಗಳನ್ನು ಕಲ್ಪಿಸುವಲ್ಲಿ ಈ ವೇದಿಕೆಯು ನೆರವಾಗುತ್ತಿದೆ. ಕೃಷಿಯಲ್ಲಿ ಹೆಚ್ಚಿನ ಮಾಹಿತಿ, ತಂತ್ರಜ್ಞಾನದ ಬಳಕೆಯಿಂದಾಗಿ ಇತರೆ ದೇಶಗಳು ಸಹ ನಮ್ಮ ಆಧುನಿಕ ಕೃಷಿಯನ್ನು ಹೊಗಳುವಂತಾಗಿದೆ. ರೈತನು ಬೆಳೆದ ಬೆಳೆಗೆ ಉತ್ತಮಬೆಲೆ ಸಿಗಲಿ, ರೈತರ ಬದುಕು ಹಸನಾಗಲಿ ಎಂದು ಹಾರೈಸಿದರು.



ಕೃಷಿಮೇಳ - 2023ರ ನಾಲ್ಕು ದಿನಗಳ ವಹಿವಾಟು

ಕ್ರ.ಸಂ.	ದಿನಗಳು	ಭಾಗವಹಿಸಿದವರು (ಲಕ್ಷಗಳಲ್ಲಿ)	ಮಾರಾಟ (ಕೋಟಿಗಳಲ್ಲಿ)	ರಿಯಾಯಿತಿ ದರದ ಭೋಜನಾಲಯದಲ್ಲಿ ಮತ್ತು ಕೃಷಿ ಉಪಕರಣಗಳ ಮಳಿಗೆಯಲ್ಲಿ (ಸಾವಿರಗಳಲ್ಲಿ)
1	ಗುರುವಾರ ದಿನ (17-11-2023)	1.21	0.8	8.0
2	ಶುಕ್ರವಾರ ದಿನ (18-11-2023)	1.48	1.38	9.6
3	ಶನಿವಾರ ದಿನ (19-11-2023)	1.10	1.65	9.3
4	ಭಾನುವಾರ ದಿನ (20-11-2023)	3.78	1.45	9.5
5	ಒಟ್ಟು	15.67	5.28	35.4

21-11-2023
Hosadiganta- Pg 10

21-11-2023
V-karnataka- Pg 02

ಮೇಳಕ್ಕೆ 15.67 ಲಕ್ಷ ಮಂದಿ ಆಗಮನ । 5.28 ಕೋಟಿ ವಹಿವಾಟು । ಬರ ನಡುವೆಯೂ ಜನೋತ್ಸಾಹ

ರೈತ ಚುಂಬಕ ಕೃಷಿ ಮೇಳಕ್ಕೆ ಖುಷಿಯ ತೆರೆ

■ ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯದಲ್ಲಿ ಕಡು ಬರಗಾಲವಿದೆ. ಕೃಷಿ ಮೇಳಕ್ಕೂ ರೈತರು, ಜನರ ಬರ ಎದುರಾಗಬಹುದು ಎಂಬ ಆತಂಕದಿಂದಲೇ ನಾಲ್ಕು ದಿನಗಳ ಬೆಂಗಳೂರು ಜಿಕೆವಿಕೆಯ ಕೃಷಿ ಮೇಳ ಆರಂಭಗೊಂಡಿತ್ತು. ಮೇಳದ ಮುಕ್ತಾಯದ ದಿನವಾದ ಸೋಮವಾರ ಒಟ್ಟಾರೆ ಅವಲೋಕನ ಮಾಡಿದಾಗ ಅಭೂತಪೂರ್ವ ಸ್ಪಂದನೆ ವ್ಯಕ್ತವಾಗಿದೆ. ಕೃಷಿಯ ಜ್ಞಾನದ ವಿಸ್ತಾರ ಮುಮ್ಮಡಿಗೊಳ್ಳುತ್ತಿರುವುದು ಗೋಚರಿಸಿದೆ.

ಜಿಕೆವಿಕೆ ಆವರಣದಲ್ಲಿ ನಾಲ್ಕು ದಿನಗಳ ರೈತ ಜಾತ್ರೆಗೆ ಸೋಮವಾರ ಅದ್ಧೂರಿ ತೆರೆಬಿದ್ದಿತ್ತು. ಮೇಳಕ್ಕೆ ಬರೋಬ್ಬರಿ 15.67 ಲಕ್ಷ ಮಂದಿ ಆಗಮಿಸಿದ್ದು, 5.28 ಕೋಟಿ ರೂ.ಗೂ ಅಧಿಕ ವಹಿವಾಟು ನಡೆದಿದೆ.

''ಬರಗಾಲಕ್ಕೆ ಪೂರಕವಾಗಿ ಕೃಷಿ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿದ್ದರಿಂದ ಹಾಗೂ ಅದಕ್ಕೆ ಸೂಕ್ತವಾದ ಬೆಳೆಗಳು, ತಾಕುಗಳು, ಹೊಸ ತಳಿಗಳನ್ನು ಪರಿಚಯಿಸಿದ್ದರಿಂದ ಮೇಳಕ್ಕೆ ನಮ್ಮ ನಿರೀಕ್ಷೆಗೂ ಮೀರಿ ರೈತರು ಆಗಮಿಸಿದ್ದರು,'' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ್ ಅಭಿಪ್ರಾಯಪಟ್ಟರು. ಚಾಮರಾಜನಗರ, ಮೈಸೂರು, ಹಾಸನ, ಮಂಡ್ಯ, ತುಮಕೂರು, ಕೋಲಾರ ಮತ್ತು ಚಿಕ್ಕಬಳ್ಳಾಪುರ ಸೇರಿ ರಾಜ್ಯದ ನಾನಾ ಜಿಲ್ಲೆಗಳ ರೈತರನ್ನು ಬೇರೆ ಬೇರೆ ದಿನಗಳಂದು ಮೇಳಕ್ಕೆ ಆಹ್ವಾನಿಸಲಾಗಿತ್ತು. ಕೃಷಿ ಕ್ಷೇತ್ರದಲ್ಲಿ ಸಾಧನೆಗೈದ ರೈತರಿಗೆ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.





ಕೃಷಿ ಮೇಳದಲ್ಲಿ ಪ್ರದರ್ಶಿಸಿದ ತಂತ್ರಜ್ಞಾನಗಳು, ಹೊಸ ತಳಿಗಳು, ತಾಕುಗಳು ಇತ್ಯಾದಿಗಳ ಬಗ್ಗೆ 3-4 ನಿಮಿಷಗಳ ವಿಡಿಯೊಗಳನ್ನು ಕೃಷಿ ವಿವಿಯ ಯೂಟ್ಯೂಬ್ ಚಾನೆಲ್‌ನಲ್ಲಿ ಪ್ರಸಾರ ಮಾಡಲಾಗುವುದು. ಮೇಳದ ಯಶಸ್ಸು, ಪ್ರಕ್ರಿಯೆಗಳನ್ನು ಆಧರಿಸಿದ ವಿಚಾರಗಳು, ತಂತ್ರಜ್ಞಾನಗಳು ಹಲವು ರೈತರಿಗೆ ಅನುಕೂಲವಾಗಲಿವೆ.



-ಡಾ. ಎಸ್.ವಿ. ಸುರೇಶ್
ಕುಲಪತಿಗಳು, ಬೆಂಗಳೂರು ಕೃಷಿ ವಿವಿ

35 ಸಾವಿರ ಮಂದಿ ಊಟ : ರೈತರಿಗೆ ಪ್ರತಿ ವರ್ಷ 50 ರೂ. ದರದಲ್ಲಿ ಊಟ ನೀಡಲಾಗುತ್ತಿತ್ತು. ಈ ಬಾರಿ 40 ರೂ.ಗೆ ಇಳಿಸಲಾಗಿತ್ತು. ಹೀಗಾಗಿ 35 ಸಾವಿರಕ್ಕೂ ಹೆಚ್ಚಿನ ಮಂದಿ ರಿಯಾಯಿತಿ ದರದಲ್ಲಿ ಊಟ ಮಾಡಿದರು. ನಾಲ್ಕು ದಿನಗಳ ರೈತ ಜಾತ್ರೆಯಲ್ಲಿ 35.4 ಸಾವಿರ ಮಂದಿ ಭೋಜನಾಲಯದಲ್ಲಿ ಊಟ ಸವಿದರು. ಕೊನೆಯ ದಿನ 8.5 ಸಾವಿರ ಮಂದಿ ಭೋಜನ ಮಾಡಿದರು.

625 ಮಳಿಗೆಗಳು, ಸಾವಿರಾರು ಬಗೆಯ ಪ್ರದರ್ಶನಗಳು, ಲಕ್ಷಾಂತರ ಮಂದಿ ನೋಡುಗರಿಂದ ತುಂಬಿದ್ದ ಕೃಷಿ ಮೇಳ ಜನಾಕರ್ಷಣೆಗೆ ಪಾತ್ರವಾಯಿತು. ಕೊನೆಯ ದಿನವಾದ ಸೋಮವಾರ 3.78 ಲಕ್ಷ ಮಂದಿ ಭೇಟಿ ನೀಡಿದ್ದು, 1.45 ಕೋಟಿ ರೂ. ವಹಿವಾಟು ನಡೆದಿದೆ.

ಸಿಎಂ ಭೇಟಿ ಸ್ಫೂರ್ತಿ : ಮುಖ್ಯಮಂತ್ರಿಗಳು ಕೃಷಿ ಮೇಳದಲ್ಲಿ ಫೀಲ್ಡ್‌ಗೆ ವಿಸಿಟ್ ಮಾಡಿದ್ದು, ವಿಜ್ಞಾನಿ, ಸಂಶೋಧಕರಲ್ಲಿ ಸ್ಫೂರ್ತಿ ಮೂಡಿಸಿದೆ. ಕಳೆದ ಬಾರಿ ಮೇಳದ ಸಂದರ್ಭದಲ್ಲಿ ಮಳೆ ಬಿದ್ದು ಅವ್ಯವಸ್ಥೆಯಾಗಿತ್ತು. ಈ ಮಳೆ ನೀರು ಎಲ್ಲೂ ನಿಲ್ಲದಂತೆ ಸರಾಗವಾಗಿ ಹರಿದು ಹೋಗುವಂತೆ ಚರಂಡಿ ನಿರ್ಮಿಸಲಾಗಿತ್ತು. ಪಾರ್ಕಿಂಗ್ ಸಮಸ್ಯೆಯಾಗದಂತೆ ಜಿಕೆವಿಕೆ ಆವರಣದ 10 ಎಕರೆ ಜಾಗದಲ್ಲಿ ದ್ವಿಚಕ್ರ ವಾಹನಗಳು, ಕಾರುಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿತ್ತು. ರಾಜ್ಯದ ನಾನಾ ಭಾಗಗಳಿಂದ ರೈತರನ್ನು ಕರೆತಂದ ಬಸ್‌ಗಳ ನಿಲುಗಡೆಗೆ ಜಕ್ಕೂರು ವಿಮಾನ ನಿಲ್ದಾಣದಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಹೀಗಾಗಿ ಸಂಚಾರ ದಟ್ಟಣೆ ಉಂಟಾಗಲಿಲ್ಲ. ''ಒಟ್ಟಾರೆ ಮೇಳ ಯಶಸ್ವಿಯಾಯಿತು. ರೈತರ ಆಭಿಲಾಷೆ, ಸಮಸ್ಯೆಗಳಿಗೆ ಸ್ಪಂದಿಸುವಂತೆ ಎಲ್ಲಾ ವ್ಯವಸ್ಥೆ ಮಾಡಲಾಗಿತ್ತು. ಸಿರಿಧಾನ್ಯಗಳಿಗೂ ಒತ್ತು ನೀಡಲಾಗಿತ್ತು,'' ಎಂದು ಕುಲಪತಿಗಳು ಸಂತಸ ವ್ಯಕ್ತಪಡಿಸಿದರು.

ಪ್ರಶಸ್ತಿ ಪ್ರದಾನ: ಕೃಷಿಮೇಳದ ಸಮಾರೋಪ ಸಮಾರಂಭದಲ್ಲಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲಾ ಮಟ್ಟದ 'ಪ್ರಗತಿಪರ ರೈತ', 'ರೈತ ಮಹಿಳೆ', ಈ ಜಿಲ್ಲೆಗಳ ತಾಲ್ಲೂಕು ಮಟ್ಟದಲ್ಲಿ ಆತ್ಯುತ್ತಮ 'ಯುವರೈತ' ಹಾಗೂ 'ರೈತ ಮಹಿಳೆ' ಪ್ರಶಸ್ತಿ ಪ್ರದಾನ ಮಾಡಲಾಯಿತು. ವಸ್ತು ಪ್ರದರ್ಶನದ ಅತ್ಯುತ್ತಮ ಮಳಿಗೆಗಳಿಗೆ ಪ್ರಶಸ್ತಿ ನೀಡಲಾಯಿತು. ಮಹರ್ಷಿ ಆನಂದ್ ಗುರೂಜಿ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ್ ಇದ್ದರು. ದಕ್ಷಿಣ ಕರ್ನಾಟಕದ 10 ಜಿಲ್ಲೆಗಳಿಂದ 15 ತಂಡಗಳಲ್ಲಿ 900 ವಿದ್ಯಾರ್ಥಿಗಳು ಭಾಗವಹಿಸಿ ಸಮಾರೋಪಕ್ಕೆ ಮೆರಗು ನೀಡಿದರು.

900 ವಿದ್ಯಾರ್ಥಿಗಳು ಭಾಗವಹಿಸಿ ಸಮಾರೋಪಕ್ಕೆ ಮೆರಗು

3.78 ಲಕ್ಷ ಮಂದಿ ಕೊನೆ ದಿನ ಭೇಟಿ

1.45 ಕೋಟಿ ಕೊನೆ ದಿನ ವಹಿವಾಟು

35.4 ಸಾವಿರ ಮಂದಿಯಿಂದ ರಿಯಾಯಿತಿ ದರದ ಊಟ

ಸ್ಥಳದಲ್ಲೇ ಟ್ರ್ಯಾಕ್ಟರ್ ಬುಕ್

'ಆಹಾರ, ಆರೋಗ್ಯ, ಆದಾಯಕ್ಕಾಗಿ ಸಿರಿಧಾನ್ಯಗಳು' ಘೋಷವಾಕ್ಯದಡಿ ನಡೆದ ಮೇಳವು ಯಶಸ್ವಿಯಾಗಿ ನಡೆಯಿತು. ಈ ಸಲ ಸಿರಿಧಾನ್ಯ ಉತ್ಪನ್ನಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು. ಇದೇ ಮೊದಲ ಬಾರಿಗೆ ಮೇಳದಲ್ಲಿಯೇ ರೈತರೊಬ್ಬರು ಟ್ರ್ಯಾಕ್ಟರ್ ಅನ್ನು ಬುಕ್ ಮಾಡಿದ್ದಾರೆ.



''ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನಾವು ಕೃಷಿ ಮಾಡುತ್ತಿದ್ದೇವೆ. ಕೃಷಿಜ್ಞಾನ ಹೆಚ್ಚಿಸಿಕೊಳ್ಳಲು ಕಳೆದ ಮೂರು ಬಾರಿಯಿಂದ ಕೃಷಿ ಮೇಳಕ್ಕೆ ಬರುತ್ತಿದ್ದೇನೆ. ಯುವಜನರು ಕೃಷಿಯಲ್ಲಿನ ತಂತ್ರಜ್ಞಾನಗಳನ್ನು ಬಳಸಿಕೊಂಡು ಯಾವುದೇ ಐಟ ಉದ್ಯೋಗಿಗಳಿಗೆ ಕಡಿಮೆಯಿಲ್ಲದಂತೆ ಆರ್ಥಿಕವಾಗಿ ಸ್ವಾವಲಂಬಿಯಾಗಲು ನಾನು ಟ್ರ್ಯಾಕ್ಟರ್ ಖರೀದಿಗಾಗಿ ಮೇಳದಲ್ಲೇ ಮುಂಗಡ ಬುಕ್ಕಿಂಗ್ ಮಾಡಿದ್ದೇನೆ ಎನ್ನುತ್ತಾರೆ ವಿದ್ಯಾರಣ್ಯಪುರದ ಪವನ್‌ಕುಮಾರ್.

■ ಸೆನ್ಸಾರ್ ಆಧಾರಿತ ಕೇಕ್ ಯಂತ್ರಗಳು

ಕೇಕ್ ತಯಾರಿಸಲು ಈಗ ಸೆನ್ಸಾರ್ ಆಧಾರಿತ ಯಂತ್ರಗಳು ಬಂದಿವೆ. ಬೇಕರಿ ಮಳಿಗೆಯಲ್ಲಿ ಈ ಕುರಿತು ಯಂತ್ರಗಳ ಪ್ರದರ್ಶನ ಮತ್ತು ಮಾಹಿತಿ ನೀಡಲಾಗುತ್ತಿತ್ತು. 7.50 ಲೀಟರ್‌ನಿಂದ 85 ಲೀಟರ್‌ವರೆಗಿನ ಸಾಮರ್ಥ್ಯದ ಕೇಕ್ ಮಿಕ್ಸ್ ತಯಾರಿ ಯಂತ್ರಗಳು ಉದ್ಯಮಿಗಳನ್ನು ಸೆಳೆಯುತ್ತಿದ್ದವು.

■ ಎಸ್ಟೇ ಫಿಲ್ಟರ್ ಯಂತ್ರಗಳು

ಕೊಬ್ಬರಿ ಎಣ್ಣೆ, ಕಡ್ಲೆಕಾಯಿ ಎಣ್ಣೆಯನ್ನು ಈ ಹಿಂದೆ ಡ್ರಮ್‌ಗಳಲ್ಲಿ ಹಾಕಿ ಎರಡು ದಿನ ಬಿಟ್ಟು ಮೇಲೆಯೇ ತೆಗೆದುಕೊಳ್ಳುತ್ತಿದ್ದರು. ತ್ಯಾಜ್ಯವಿದ್ದರೆ ಅದು ಕೆಳಗೆ ಕೂರುತ್ತಿತ್ತು. ಆದರೆ ಈಗ ಈ ಎಣ್ಣೆಗಳನ್ನು ಫಿಲ್ಟರ್ ಮಾಡಲೆಂದೇ ಯಂತ್ರಗಳು ಬಂದಿವೆ.

■ ಸಲಹಾ ಸೇವಾಗಳ ಕೂಟ ಸದ್ದಳಕೆ

ಮೇಳದಲ್ಲಿ ಸ್ಥಾಪಿಸಿರುವ ಸಲಹಾ ಸೇವಾಗಳ ಕೂಟಕ್ಕೆ ಎರಡು ಸಾವಿರಕ್ಕೂ ಅಧಿಕ ಮಂದಿ ಭೇಟಿ ನೀಡಿ ನಾನಾ ಮಾಹಿತಿಗಳನ್ನು ಪಡೆದುಕೊಂಡರು. ಬೇಸಾಯಶಾಸ್ತ್ರ ಮಣ್ಣು ವಿಜ್ಞಾನ ಮತ್ತು ಕೃಷಿ ರಾಸಾಯನಶಾಸ್ತ್ರ, ತೋಟಗಾರಿಕೆ, ಅನುವಂಶೀಯತೆ ಮತ್ತು ಸಸ್ಯಗಳಶಾಸ್ತ್ರ ಪರಿಸರ ವಿಜ್ಞಾನ ವಿಭಾಗ ಇತ್ಯಾದಿಗಳ ಬಗ್ಗೆ ಮಾಹಿತಿ ಪಡೆದರು.

■ ಆನ್‌ಲೈನ್‌ನಲ್ಲೂ ಪ್ರಸಾರ

ಆನ್‌ಲೈನ್‌ನಲ್ಲೂ ಕೃಷಿ ಮೇಳದ ಪ್ರಸಾರ ನಡೆಯಿತು. ಪ್ರತಿ ನಿತ್ಯ ವಿವಿಧ ಚರ್ಚಾಗೋಷ್ಠಿಗಳು ನಡೆದವು. ಭೌತಿಕವಾಗಿ ಮೇಳಕ್ಕೆ ಬರಲಾಗದವರು ಆನ್‌ಲೈನ್‌ನಲ್ಲೇ ವೀಕ್ಷಿಸಿದರು.

■ ಟೆರೆಸ್‌ಗಳಲ್ಲಿ ಮಾವು-ಹಲಸು

ನಾಟ ಮಾಡಿದ 9 ತಿಂಗಳಲ್ಲೇ ಫಸಲು ಕೊಡುವ ಆರ್ಕೆಂಟ್ರಿನಾ ಮಾವು ನರ್ಸರಿಗಳಲ್ಲಿ ವಿಶೇಷವಾಗಿ ಗಮನ ಸೆಳೆದವು. ಈ ಎರಡೂ ತಳಿಗಳು ಟೆರೆಸ್ ಗಾರ್ಡನ್‌ಗೆ ಹೇಳಿ ಮಾಡಿಸಿದಂತಿದೆ.

■ ಕಾಡುಪ್ರಾಣಿ ಓಡಿಸಲು ಔಷಧ

ತೋಟ, ಹೊಲ, ಗದ್ದೆಗಳಲ್ಲಿ ಕಾಡು ಹಂದಿ, ಕೋತಿ, ಇಲಿಗಳ ಹಾವಳಿಯನ್ನು ತಡೆಯಲು ಸಾಯವ ಔಷಧಗಳು ಬಂದಿವೆ. ಮನೆಗಳ ಬಾಹವು, ಇಲಿ ಇತ್ಯಾದಿಗಳನ್ನು ಓಡಿಸಲು ಕೂಡ ಸಾವಯವ ಔಷಧಗಳು ಬಂದಿವೆ. ಇವು ಪ್ರಾಣಿಗಳನ್ನು ಕೊಲ್ಲುವುದಿಲ್ಲ. ಆದರೆ ವಾಸನೆಯಿಂದಲೇ ಓಡುತ್ತವೆ. ಇದರಿಂದ ಬೆಳೆ ಪ್ರಾಣಿಗಳಿಗಾಗಲಿ ಅಥವಾ ಮನುಷ್ಯರಿಗಾಗಲಿ ಯಾವುದೇ ರೀತಿ ತೊಂದರೆಯಿಲ್ಲ, ಶಿವಮೊಗ್ಗದ ಡಾಕ್ಟರ್ ಬ್ರಾಂಡ್ ಮಳಿಗೆಯಲ್ಲಿ ಈ ಸಾವಯವ ಔಷಧಿಗಳನ್ನು ರೈತರು ಏರೀದಿಸಿದರು.

ಜಾನುವಾರುಗಳ ಮ್ಯಾಟ್‌ಗಳಿಗೆ ರೈತರಿಂದ ಭಾರಿ ಬೇಡಿಕೆ



ಜಾನುವಾರುಗಳಿಗಾಗಿ ಮ್ಯಾಟ್‌ಗಳು ಬಂದಿದ್ದು, ಇದಕ್ಕೆ ಮೇಳದಲ್ಲಿ ರೈತರಿಂದ ಭಾರಿ ಬೇಡಿಕೆ ಬಂದಿದೆ.

ಮೇಳದಲ್ಲಿ ಮ್ಯಾಟ್‌ಗಳ ಪ್ರದರ್ಶನವೂ ಇತ್ತು. ಶಿಡ್ಲಘಟ್ಟ ತಾಲೂಕಿನ ಪಬ್ಲಿಕ್ ಆಗ್ರೊ ಮಳಿಗೆಯಲ್ಲಿ ರಬ್ಬರ್ ಮ್ಯಾಟ್ ಮಾಹಿತಿ ಪಡೆಯಲು ರೈತರು ಮುಗಿಬಿದ್ದಿದ್ದರು.

ಗರ್ಭ ಧರಿಸಿದ ಹಸು, ಎಮ್ಮೆಗಳು ನಿಲ್ಲುವಾಗ ಹಾಗೂ ಮಲಗುವಾಗ ತುಂಬಾ ಕಷ್ಟಪಡುತ್ತವೆ. ಕೊಟ್ಟಿಗೆಯಲ್ಲಿ ಕಲ್ಲುಗಳು ಹಾಸಿದ್ದರೆ ಜಾರಿ ಬೀಳುತ್ತವೆ. ಹೀಗಾಗಿ ಇದನ್ನು ತಡೆಯಲು ಈ ಹಾಸಿಗೆಗಳನ್ನು ಉಪಯೋಗಿಸಲಾಗುತ್ತಿದೆ. ಸುಮಾರು 700-800 ಕೆ.ಜಿ ತೂಕದ ಜಾನುವಾರುಗಳು ಜಾರಿ ಬಿದ್ದರೆ, ಆದರಲ್ಲೂ ಗರ್ಭ ಧರಿಸಿರುವಾಗ ಜಾರಿಗೆ ಸಾಕಷ್ಟು ಸಮಸ್ಯೆಗೆ ಸಿಲುಕುತ್ತವೆ. ಹೀಗಾಗಿ ಈ ಮ್ಯಾಟ್‌ಗಳು ಹೆಚ್ಚು ಅನುಕೂಲ.



ಮಳಿಗೆಯ ಮಾಲೀಕ ಎಂ.ಎಸ್.ಮನು ಅವರು ಜಾನುವಾರುಗಳಿಗೆ ಹಾಸಿಗೆಗಳನ್ನು ಬಳಸುವುದರಿಂದ ಗೊರಸುಗಳಿಗೆ ಗಾಯವಾಗುವುದಿಲ್ಲ. ಒಂದು ಮ್ಯಾಟ್‌ಗೆ ಸುಮಾರು 5 ವರ್ಷಗಳ ಕಾಲ ಬಾಳಿಕೆ ಬರುತ್ತದೆ. ಗಂಜಲ, ಸಗಣಿ ಬಿದ್ದರೆ ಈ ಹಾಸಿಗೆಗಳನ್ನು ಸುಲಭವಾಗಿ ಸ್ವಚ್ಛಗೊಳಿಸಬಹುದು.ಹಾಸಿಗೆ 3,200 ರೂ.ಗೆ ದೊರೆಯಲಿದ್ದು ಡೈರಿಯಿಂದ ಹಸು ಮ್ಯಾಟ್‌ಗಳಿಗೆ ಸಬ್ಸಿಡಿಯೂ ಸಿಗುತ್ತದೆ ಎಂದು ಮಾಹಿತಿ ನೀಡಿದರು.

''ಈ ಮ್ಯಾಟ್‌ಗಳು ಐರ್ಲೆಂಡ್‌ಗೆ ಹೆಚ್ಚಿನ ಪ್ರಮಾಣದಲ್ಲಿ ರವು ಮಾಡಲಾಗುತ್ತಿದೆ,''ಎಂದು ಮನು ತಿಳಿಸಿದರು.



ಪ್ರಜಾವಾಣಿ
ಮಂಗಳವಾರ • ನವೆಂಬರ್ 21, 2023

ಕೃಷಿ ಸೊಬಗು 'ಸಿರಿಧಾನ್ಯ'ದ ಬೆರಗು



ಸಾಧಕ ಕೃಷಿಕರಾದ ವಿ.ರೂಪ (ಕೋಲಾರ ಜಿಲ್ಲೆ), ಆರ್.ಸ್ವಾತಿ (ಚಿಕ್ಕಬಳ್ಳಾಪುರ ಜಿಲ್ಲೆ), ಟಿ.ಎನ್.ರವಿ (ಕೋಲಾರ ಜಿಲ್ಲೆ), ಡಿ.ಕೆ.ಚಂದ್ರಪ್ಪ (ಚಿಕ್ಕಬಳ್ಳಾಪುರ ಜಿಲ್ಲೆ) ಅವರನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ಸೋಮವಾರ ನಡೆದ ಕೃಷಿ ಮೇಳದ ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕೃಷಿ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ಎಂ.ಚಂದ್ರೇಗೌಡ, ಟಿ.ಕೆ.ಪ್ರಭಾಕರ್ ಶೆಟ್ಟಿ, ಎನ್.ದಿನೇಶ್, ಆಧ್ಯಾತ್ಮಿಕ ಚಿಂತಕ ಮಹರ್ಷಿ ಆನಂದ್ ಗುರೂಜಿ, ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ.ಸುರೇಶ್, ವ್ಯವಸ್ಥಾಪನಾ ಮಂಡಳಿ ಸದಸ್ಯ ಬಿ.ಎಸ್.ಉಲ್ಲಾಸ್, ಎಚ್.ಎಲ್.ಹರೀಶ್, ಜಲಾನಯನ ಅಭಿವೃದ್ಧಿ ಇಲಾಖೆಯ ನಿರ್ದೇಶಕ ಡಾ.ಬಿ.ವೈ.ಶ್ರೀನಿವಾಸ್ ಮತ್ತು ಕೃಷಿ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕ ವೆಂಕಟೇಶ್ ಇದ್ದರು –ಪ್ರಜಾವಾಣಿ ಚಿತ್ರ

ಪ್ರಶಸ್ತಿ ಪ್ರದಾನ

ಕೃಷಿಮೇಳದ ಸಮಾರೋಪ ಸಮಾರಂಭದಲ್ಲಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲಾ ಮಟ್ಟದ 'ಪ್ರಗತಿಪರ ರೈತ', 'ರೈತ ಮಹಿಳೆ', ಈ ಜಿಲ್ಲೆಗಳ ತಾಲ್ಲೂಕು ಮಟ್ಟದಲ್ಲಿ ಅತ್ಯುತ್ತಮ 'ಯುವರೈತ' ಹಾಗೂ 'ರೈತ ಮಹಿಳೆ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಮತ್ತು ಪ್ರದರ್ಶನದ ಅತ್ಯುತ್ತಮ ಮಳಿಗೆಗಳಿಗೆ ಪ್ರಶಸ್ತಿ ನೀಡಲಾಯಿತು.

ಮಹರ್ಷಿ ಆನಂದ್ ಗುರೂಜಿ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ್ ಇದ್ದರು. ದಕ್ಷಿಣ ಕರ್ನಾಟಕದ 10 ಜಿಲ್ಲೆಗಳಿಂದ 15 ತಂಡಗಳಲ್ಲಿ 900 'ದೇಸಿ' ಕೋರ್ಸ್ ಕಲಿಯುತ್ತಿರುವ ವಿದ್ಯಾರ್ಥಿಗಳು ಭಾಗವಹಿಸಿ ಸಮಾರೋಪಕ್ಕೆ ಮೆರುಗು ನೀಡಿದರು.



ಕೃಷಿ ಮೇಳದಲ್ಲಿ ಸೋಮವಾರ ವಿದ್ಯಾರ್ಥಿಗಳು ಕೃಷಿ ಪರಿಕರ ಯಂತ್ರದಿಂದ ಬಂದ ಸ್ಪೇ ನೀರಿನಲ್ಲಿ ಸಂಭ್ರಮಿಸಿದರು

ಸರ್ವಋತು ಗಿಡಗಳು

ಮನೆ ತಾರಸಿಯಲ್ಲೇ ಬೆಳೆಯಬಲ್ಲ ವಿಯೆಟ್ನಾಂ ಸೂಪರ್ ಆರ್ಲಿ ಹಲಸಿನ ಗಿಡಗಳನ್ನು ಜನರು ಭಾರಿ ಸಂಖ್ಯೆಯಲ್ಲಿ ಖರೀದಿ ಮಾಡುತ್ತಿರುವುದು ಕಂಡು ಬಂತು. ಹಿತಕಾರಿ ನರ್ಸರಿಯಲ್ಲಿದ್ದ ಈ ಗಿಡಗಳು ಒಂದೇ ವರ್ಷಕ್ಕೆ ಹಣ್ಣು ನೀಡುತ್ತವೆ. 40-50 ವರ್ಷ ಫಲ ನೀಡುವ ಈ ಗಿಡಗಳು ಹೆಚ್ಚು ಎತ್ತರ ಬೆಳೆಯುವುದಿಲ್ಲ ಎಂದು ನರ್ಸರಿಯ ಆಡಳಿತ ನಿರ್ದೇಶಕ ಬೈರಡ್ಡಿ ಎಂ.ಎಸ್. ಮಾಹಿತಿ ನೀಡಿದರು.

ಇದೇ ರೀತಿ ವರ್ಷ ಪೂರ್ತಿ ಕಾಯಿ ಬಿಡುವ ನಿಂಬೆ, ಮಾವು ಸಹಿತ ವಿವಿಧ ನರ್ಸರಿಗಳಲ್ಲಿ ಇದ್ದ ತರಹೇವಾರಿ ಗಿಡಗಳು ಗಮನ ಸೆಳೆದವು. ₹50 ಸಾವಿರ ಮೌಲ್ಯದ 'ಪ್ರಪಲಿಯನ್ ಟ್ರೀ ಗ್ರೇಪ್' ಗಿಡವನ್ನು ಜನರು ವೀಕ್ಷಿಸಿ ಅದರ ದರ ಕಂಡು ಹೌಹಾರಿ ಮುಂದಕ್ಕೆ ಸಾಗುತ್ತಿದ್ದರು.



ವಿದ್ಯಾರ್ಥಿಗಳು ಕೃಷಿ ಪರಿಕರಗಳನ್ನು ಕುತೂಹಲದಿಂದ ವೀಕ್ಷಿಸಿದರು ಪ್ರಜಾವಾಣಿ ಚಿತ್ರಗಳು: ರಂಜು ಪಿ.



ತಾರಸಿಯಲ್ಲೇ ಬೆಳೆಸಬಹುದಾದ 'ವಿಯೆಟ್ನಾಂ ಸೂಪರ್ ಆರ್ಲಿ' ಹಲಸು

ನಾಲ್ಕು ದಿನಗಳಲ್ಲಿ 15 ಲಕ್ಷ ಜನರ ಭೇಟಿ • ₹5.28 ಕೋಟಿ ವಹಿವಾಟು

ಕೃಷಿ ಮೇಳಕ್ಕೆ ತೆರೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನೂರಾರು ಮಳಿಗೆಗಳು, ಸಾವಿರಾರು ಬಗೆಯ ಪ್ರದರ್ಶನಗಳು, ಲಕ್ಷಾಂತರ ಮಂದಿ ನೋಡುಗರಿಂದ ತುಂಬಿ ಹೋಗಿದ್ದ ನಾಲ್ಕು ದಿನಗಳ ಕೃಷಿ ಮೇಳಕ್ಕೆ ಸೋಮವಾರ ತೆರೆ ಬಿತ್ತು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ಆಯೋಜಿಸಲಾಗಿದ್ದ ಈ ಕೃಷಿ ಮೇಳದಲ್ಲಿ ನಾಲ್ಕು ದಿನಗಳಲ್ಲಿ ಒಟ್ಟು 15.67 ಲಕ್ಷ ರೈತರು, ವಿದ್ಯಾರ್ಥಿಗಳು, ಕೃಷಿ ಆಸಕ್ತರು ಭೇಟಿ ನೀಡಿದ್ದರು. ವಿವಿಧ ಮಳಿಗೆಗಳಲ್ಲಿ ₹ 5.28 ಕೋಟಿ ವಹಿವಾಟು ನಡೆಯಿತು.

ಬೆಲ್ಲದ ಪರಿಷೆ: ಆರೋಗ್ಯಕ್ಕೆ ಸಕ್ಕರೆಗಿಂತ ಒಳ್ಳೆಯದಾಗಿರುವ ಬೆಲ್ಲದ ಬಗ್ಗೆ ಜಾಗೃತಿ ಮೂಡಿಸಲು ಮಂಡ್ಯ ಕೃಷಿ ಇಲಾಖೆಯೂ ನಡೆಸಿದ ಬೆಲ್ಲದ ಪರಿಷೆ ಜನರ ಗಮನ ಸೆಳೆಯಿತು. ಮಳಿಗೆಯಲ್ಲಿ ರೋಲ್ ಬೆಲ್ಲ, ಗುಂಡು ಬೆಲ್ಲ, ಬಕೆಟ್ ಬೆಲ್ಲ, ಅಚ್ಚು ಬೆಲ್ಲ ಹೀಗೆ ತರಹೇವಾರಿ ಬೆಲ್ಲದುಂಡೆಗಳನ್ನು ಒಪ್ಪವಾಗಿ ಜೋಡಿಸಿದ್ದರು. ಜತೆಗೆ ಬೆಲ್ಲದಲ್ಲೇ ಮಾಡಿರುವ ಗೋಲಾಕಾರ, ಗೋಪುರ, ಗಾಣದ ಮನೆ, ಗಣಪತಿ ವಿಗ್ರಹ, ಗೌರಿ ವಿಗ್ರಹ, ದೀಪ ಇನ್ನಿತರ ಆಕೃತಿಗಳು ಗಮನ ಸೆಳೆದವು.

ಸೌದೆ ಒಲೆ: ಮನೆ ಮುಂದೆ ಎರಡು ತೆಂಗಿನ ಮರಗಳಿದ್ದರೆ ಸಾಕು, ಅವುಗಳಿಂದ ದೊರೆಯುವ ತೆಂಗಿನ ಕಾಯಿ ಸಿಪ್ಪೆಯಂತಹ ಮಸ್ತುಗಳಿಂದಲೇ ಸುಲಭದಲ್ಲಿ ಬಿಸಿ ನೀರು ತಯಾರಿಸುವ ಬಾಯ್ಲರ್‌ಗಳು, ಕಡಿಮೆ ಸೌದೆಯಲ್ಲಿ ಒಲೆ ಉರಿಸಿ ಅಡುಗೆ ಮಾಡಬಹುದಾದ ಒಲೆಗಳ ಬಗ್ಗೆ ಜನರು ವಿವರ ಪಡೆದರು. ಫೀನಿಕ್ಸ್ ಪ್ರಾಡಕ್ಟ್ ಮಳಿಗೆಯಲ್ಲಿದ್ದ ಇಂಥ ಒಲೆಗಳ ಪ್ರಾತ್ಯಕ್ಷಿಕೆಗಳನ್ನು ವೀಕ್ಷಿಸಿದರು. 'ಸಾಮಾನ್ಯವಾಗಿ ಅಡುಗೆ ತಯಾರಿಗಾಗಿ ಒಲೆ ಉರಿಸಲು ಬಳಸುವ ಸೌದೆಯ ಶೇ10ರಷ್ಟರಲ್ಲಿ ಈ ಹೊಸ ತಂತ್ರಜ್ಞಾನದ ಒಲೆಯಲ್ಲಿ ಅಡುಗೆ ಮಾಡಬಹುದು' ಎಂದು ಮಳಿಗೆಯ ಬಸವರಾಜ್ ಬೆಳಗಾವಿ ವಿವರಿಸಿದರು.

ವಿದೇಶಿ ಸೊಪ್ಪು ತರಕಾರಿ: ಪಾಲಿಹೌಸ್‌ನಲ್ಲಿ ಬೆಳೆದ ಕೇಲ್, ಲೀಕ್, ಸೆಲರಿ, ಪಾಕ್ ಚಾಯ್, ಐಸ್‌ಬರ್ಗ್ ಲೆಟ್ಯೂಸ್, ಕೆಂಪು ಲೆಟ್ಯೂಸ್, ಹುಸರು ಲೆಟ್ಯೂಸ್, ರಾಕೆಟ್ ಲೆಟ್ಯೂಸ್, ರೊಮ್ಯಾನಿ ಲೆಟ್ಯೂಸ್, ಚೈನೀಸ್ ಎಲೆಕೋಸು, ಕೆಂಪು ಎಲೆಕೋಸು, ಬ್ರೊಕೋಲಿ ಯಂತಹ ತರಕಾರಿಗಳನ್ನು ಜನರು ಕುತೂಹಲದಿಂದ ವೀಕ್ಷಿಸಿ, ಮಾಹಿತಿ ಪಡೆದರು. ವಿವಿಧ ರೋಗಗಳಿಗೆ ಈ ಸೊಪ್ಪು-ತರಕಾರಿಗಳು ಉತ್ತಮ ಔಷಧವಾಗುತ್ತವೆ ಎಂದು ಕೃಷಿ ವಿಜ್ಞಾನಿಗಳು ಮಾಹಿತಿ ನೀಡಿದರು.

ಹಸುಗಳಿಗೂ ಹಾಸಿಗೆ!

ಕೊಟ್ಟಿಗೆಯಲ್ಲಿ ಸೊಪ್ಪು, ಹುಲ್ಲು ಹರಡಿ ಹಸು, ಎಮ್ಮೆಗಳನ್ನು ಸಾಕಲಾಗುತ್ತಿತ್ತು. ಮುಂದೆ ಕಲ್ಲು ಹಾಸಿನ ನೆಲ, ಸಿಮೆಂಟ್ ನೆಲಗಳಲ್ಲಿ ಸಾಕುವ ಪದ್ಧತಿ ರೂಢಿಯಾಗಿತ್ತು. ಇದೀಗ ಹಸುಗಳಿಗೂ ಹಾಸಿಗೆ ಬಂದಿದೆ!

ಕೃಷಿ ಮೇಳದಲ್ಲಿದ್ದ ಶಿಡ್ಲಘಟ್ಟ ಪಬ್ಲಿಕ್ ಆಗ್ರೊ ಮಳಿಗೆಯಲ್ಲಿ ಈ ರಬ್ಬರ್ ಹಾಸಿಗೆಗಳ ಬಗ್ಗೆಯೇ ಮಾಹಿತಿ ಪಡೆಯಲು ರೈತರು ಮುಗಿಬಿದ್ದಿದ್ದರು. ಈ ಹಾಸಿಗೆಗಳಿಗೆ ಹಾಲು ಉತ್ಪಾದಕರ ಸೊಸೈಟಿಯಲ್ಲಿ ಸದ್ಯಿಯೂ ಸಿಗುತ್ತದೆ. ಜಾನುವಾರುಗಳ ಗೊರಸಿಗೆ ಗಾಯವಾಗದ, ಜಾರಿ ಬೀಳದ ಈ ಹಾಸಿಗೆಯಲ್ಲಿ ಸಗಣಿ, ಗಂಜಲವನ್ನು ಸುಲಭವಾಗಿ ಸ್ವಚ್ಛಗೊಳಿಸಬಹುದು ಎಂದು ಮಳಿಗೆಯ ಎಂ.ಎಸ್. ಮನು ಮಾಹಿತಿ ನೀಡಿದರು.

ಮಧುವನ ಕರೆದಿದೆ... ತನುಮನ ಸೆಳೆದಿದೆ...

ಜೇನುಕೃಷಿಯತ್ತ ಆಕರ್ಷಿತರಾಗುತ್ತಿರುವ ಯುವರೈತರು

■ ಹೃತಿನ್ ಶೆಟ್ಟಿ ಬೆಂಗಳೂರು

ಜಿಕೆವಿಕೆಯಲ್ಲಿ ನಡೆಯುತ್ತಿರುವ ಕೃಷಿಮೇಳದಲ್ಲಿ ಜೇನುಹುಳುಗಳ 'ಮಧುವನ' ಸಾರ್ವಜನಿಕರನ್ನು ಆಕರ್ಷಿಸುತ್ತಿದೆ. ಇದೇ ಮೊದಲ ಬಾರಿಗೆ ವಿಭಿನ್ನವಾಗಿ ಜೇನುಕೃಷಿಯನ್ನು ರೈತರಿಗೆ ಪರಿಚಯಿಸಲು ಈ ಮಧುವನವನ್ನು ರೂಪಿಸಲಾಗಿದೆ.

ಜೇನು ನೊಣಗಳಲ್ಲಿ ತುಡುವೆ ಜೇನು, ಯೂರೋಪಿಯನ್ ಜೇನು, ಕೋಲು ಜೇನು, ನಸುರು ಜೇನು, ಹೆಜ್ಜೆನಿನಂತಹ ಒಟ್ಟು 5 ರೀತಿಯ ಪ್ರಭೇದಗಳಿದ್ದು, ಆ ಎಲ್ಲ ಪ್ರಭೇದಗಳನ್ನು ಮಧುವನದಲ್ಲಿ ಕಾಣಬಹುದು. ಈ ಎಲ್ಲ ಪ್ರಭೇದಗಳ ನೊಣಗಳು ಮಧುವನದಲ್ಲಿ ತುಂಬೆ, ಸೂರ್ಯಕಾಂತಿ, ಬಟರ್ ಡೈಸಿ, ಹೆಮೆಲಿಯಾ, ಕೂಹಿಯಾ ಸೇರಿ 12 ಬಗೆಯ ಹೂಗಿಡಗಳು ಹಾಗೂ ಕಾಡು ಜೀರಿಗೆ, ಕಾಮಕಸ್ತೂರಿ, ತೊಗರಿ ಮತ್ತು ಕಾಫಿ ಗಿಡಗಳಲ್ಲಿ ಮಕರಂದ ಹಿರುವುದನ್ನು ಕಾಣಬಹುದು. ವಿದ್ಯಾರ್ಥಿಗಳು ಜೇನು ಕೃಷಿಯಲ್ಲಿ ಆಭಿವೃದ್ಧಿಪಡಿಸಿದ ಜೇನುಗಳಿಗೆ ಆಹಾರ ಕೇಂದ್ರಗಳು ಹಾಗೂ ವಿವಿಧ ರೀತಿಯ ನೂತನ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆಗೆ ಮತ್ತು ಮಾರಾಟಕ್ಕೆ ಇರಿಸಲಾಗಿದೆ.



ಸಾಮಾನ್ಯವಾಗಿ ತುಡುವೆ ಜೇನಿನ ಒಂದುಕುಟುಂಬದಲ್ಲಿ ಒಂದುರಾಣಿಜೇನು, 100-150 ಗಂಡುಜೇನು, 15ರಿಂದ 20 ಸಾವಿರ ಕೆಲಸಗಾರ ಜೇನು ಎಂಬ ಮೂರು ರೀತಿಯಲ್ಲಿ ಕಾಣಬಹುದು. ಆದರೆ, ಕೃಷಿ ವಿವಿಯ ಜೇನು ಕೃಷಿ ವಿಭಾಗ ಒಂದೇ ಸಾಮರ್ಥ್ಯವಿರುವ ಎರಡು ಕುಟುಂಬಗಳನ್ನು ಒಂದೇ ಗೂಡಿನಲ್ಲಿ ಎರಡು ರಾಣಿ ಜೇನುಗಳು ನೇರದ ಹಾಗೆ ಜೋಡಿರಾಣಿಪೆಟ್ಟಿಗೆಯನ್ನು ಸಿದ್ಧಪಡಿಸಿದೆ. ಈ ಮೂಲಕ ಜೇನು ಹುಳುಗಳ ಸಂಖ್ಯೆ ಹೆಚ್ಚಿಸಿ ತುಪ್ಪದ ಶೇಖರಣೆ ಸಾಮರ್ಥ್ಯವನ್ನು ವೃದ್ಧಿಸಲಾಗುತ್ತಿದೆ. ಈ ಪ್ರಕ್ರಿಯೆಯಲ್ಲಿ ಕೆಲಸಗಾರ ನೊಣಗಳ ಪಲಾಯನ ಕಡಿಮೆ ಇರಲಿದೆ.

ಮಾಯಿಶ್ಚರೈಸಿಂಗ್ ಕ್ರೀಮ್

ಜೇನುಕೃಷಿ ವಿಭಾಗದಿಂದ ಜೇನು ಕುಟುಂಬ, ಜೇನು ಸಾಕಣೆ ಪೆಟ್ಟಿಗೆ, ಜೇನುತುಪ್ಪ ತಗೆಯುವ ಯಂತ್ರಗಳ ಮಾರಾಟದೊಂದಿಗೆ ವಿಭಾಗವು ರೈತರೊಂದಿಗೆ ಸೇರಿ ಜೇನುನೊಣಗಳಿಂದ ಉತ್ಪಾದಿಸಿದ ಜೇನುತುಪ್ಪ, ಜೇನು ಆಂಟು, ಜೇನು ಮೇಣ ಹಾಗೂ ಮೇಣದಿಂದ ತಯಾರಿಸಿದ ನೈಸರ್ಗಿಕ ಮಾಯಿಶ್ಚರೈಸಿಂಗ್ ಕ್ರೀಮ್ ಅಭಿವೃದ್ಧಿಪಡಿಸಲಾಗಿದೆ. ಇವುಗಳನ್ನು ವಿವಿ ಹೆಸರಿನಲ್ಲಿ ಸಾರ್ವಜನಿಸರಿಗೆ ಕಡಿಮೆ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.

ಒಂದು ಜೇನು ಕುಟುಂಬದಿಂದ 6ರಿಂದ 10 ಕೆ.ಜಿ. ತುಪ್ಪ ತೆಗೆಯಬಹುದು. ರೈತರು ಜೇನುಸಾಕಣೆಯನ್ನು ಪಲ್ಲ ರೈತರು ಆಳವಡಿಸಿಕೊಳ್ಳಲು ವಿಶ್ವವಿದ್ಯಾಲಯದಿಂದ ಪ್ರತಿ ಎರಡು ತಿಂಗಳಿಗೊಮ್ಮೆ ವಿಶೇಷ ತರಬೇತಿ ಶಿಬಿರ ಆಯೋಜಿಸಲಾಗುತ್ತಿದೆ.

| ಡಾ. ಕೆ.ಟಿ. ವಿಜಯಕುಮಾರ್ ಬೆಂಗಳೂರು ಕೃಷಿ ವಿವಿ ಜೇನು ಕೃಷಿ ವಿಭಾಗದ ಮುಖ್ಯಸ್ಥ

ಕೃಷಿ ಜಾತ್ರೆ ರೈತಮನಸುಗಳ ಜ್ಞಾನಯಾತ್ರೆ

ಉಳುವ ಯೋಗಿ-ಕೃಷಿವಿಜ್ಞಾನಿಗಳ ಸಾರ್ಥಕ ಸಮಾಗಮ | ನಾಲ್ಕು ದಿನಗಳ ಮೇಳಕ್ಕೆ ಅದ್ದೂರಿ ತೆರೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕ್ಯಾಂಪಸ್ ಜಿಕೆವಿಕೆಯಲ್ಲಿ ಆಯೋಜಿಸಿದ್ದ 'ಕೃಷಿ ಮೇಳ'ಕ್ಕೆ ಸೋಮವಾರ ಅದ್ದೂರಿ ತೆರೆಬಿದ್ದಿದೆ. ಈ ಬಾರಿ 650ಕ್ಕೂ ಅಧಿಕ ಮಳಿಗೆಗಳಲ್ಲಿ ಕೃಷಿ ಉತ್ಪನ್ನಗಳನ್ನು ಪ್ರದರ್ಶಿಸಲಾಯಿತು. ನಾಲ್ಕು ದಿನಗಳಲ್ಲಿ ಒಟ್ಟು 15.67 ಲಕ್ಷ ಮಂದಿ ಮೇಳ ಕಣ್ತುಂಬಿಕೊಂಡರು.

ಮೇಳದಲ್ಲಿ ಸ್ಥಾಪಿಸಿದ್ದ ಸಲಹೆ ಸೇವಾಗಳ ಕೇಂದ್ರವನ್ನು 2 ಸಾವಿರಕ್ಕೂ ಅಧಿಕ ಮಂದಿ ಸದ್ಬಳಕೆ ಮಾಡಿಕೊಂಡರು. ಬೇಸಾಯಶಾಸ್ತ್ರ, ಮಣ್ಣು ವಿಜ್ಞಾನ ಮತ್ತು ಕೃಷಿ ರಾಸಾಯನ ಶಾಸ್ತ್ರ, ತೋಟಗಾರಿಕೆ, ಪರಿಸರ ವಿಜ್ಞಾನ ವಿಭಾಗ, ಬೆಳೆ ಕರೀದ ಕ್ರಿಯಾಶಾಸ್ತ್ರ, ಕೃಷಿ ಕೀಟಶಾಸ್ತ್ರ, ಜೀನು ಕೃಷಿ, ರೇಷ್ಮೆ ಕೃಷಿ, ಆಹಾರ ವಿಜ್ಞಾನ ಮತ್ತು ಮಣ್ಣು, ಕೃಷಿ ಅರ್ಥಶಾಸ್ತ್ರ ವಿಭಾಗದ ಮಳಿಗೆಗಳಿಗೆ ರೈತರು ಭೇಟಿ ನೀಡಿ ಮಾಹಿತಿ ಪಡೆದರು. ಸಲಹಾ ಸೇವಾಗಳ ಕೂಟದಲ್ಲಿ ಪ್ರತಿಷ್ಠಾಪಿಸಿರುವ ಒಂದೊಂದು ಪ್ರಾತ್ಯಕ್ಷಿಕೆ ಕೇಂದ್ರಗಳಲ್ಲಿ ಕೃಷಿ ವಿಜ್ಞಾನಿಗಳು ರೈತರಿಗೆ ಉಪಯುಕ್ತ ಮಾಹಿತಿ ಜನರಿಗಿದ್ದು 4ನೇ ದಿನದ ವೈಶಿಷ್ಟ್ಯ.

ಮೇಳದಲ್ಲಿ ಕೃಷಿ ವಿವಿಯ ಮಳಿಗೆಗಳು ಹೆಚ್ಚು ಗಮನ ಸೆಳೆದವು. ಕೃಷಿ ವಿಭಾಗ, ಹವಾಮಾನ ಆಧಾರಿತ ಬೀಜ ಬಿತ್ತನೆ, ನೀರು ನಿರ್ವಹಣಾ ತಂತ್ರಜ್ಞಾನ ಕೇಂದ್ರ, ಜೋಳ, ಮಣ್ಣು, ಜಲಾನಯನ, ಭತ್ತ, ಸಸ್ಯ ಸಂರಕ್ಷಣೆ, ರೇಷ್ಮೆ, ಎಣ್ಣೆಕಾಳು, ದ್ವಿದಳ ಧಾನ್ಯ, ಕೀಟಶಾಸ್ತ್ರ, ವಾಣಿಜ್ಯ ಬೆಳೆ, ಜೈವಿಕ ಗೊಬ್ಬರ, ಜೀಜ ತಾಂತ್ರಿಕತೆ, ಜೈವಿಕ ಇಂಧನ, ಕಬ್ಬು ಪ್ರಾತ್ಯಕ್ಷಿಕ ಕೇಂದ್ರಗಳಿಗೆ ಲಕ್ಷಾಂತರ ಮಂದಿ ಭೇಟಿ ನೀಡಿದರು. ಆಯಾ ಪ್ರಾತ್ಯಕ್ಷಿಕ ಕೇಂದ್ರಗಳಲ್ಲಿ ಬೆಳೆಗಳ ಕುರಿತು ಮಾಹಿತಿ ಫಲಕ ಹಾಕಲಾಯಿತು. ತಳಿಯ ಹೆಸರು, ಬೆಳೆಯುವ ದಿನಗಳ ಅವಧಿ, ಇಳುವರಿ, ಯಾವ ತಿಂಗಳಲ್ಲಿ ಬೀಜ ಬಿತ್ತನೆ ಮಾಡಬೇಕು, ಹಿಂಗಾರು, ಮುಂಗಾರು ಸಂದರ್ಭದಲ್ಲಿ ಯಾವ್ಯಾವ ಬೆಳೆ ಬೆಳೆಯಬೇಕು, ಹವಾಮಾನ ವೈಪರಿತ್ಯ ಸಮಸ್ಯೆಯಿಂದ ಬೆಳೆ ರಕ್ಷಿಸಿಕೊಳ್ಳುವುದು ಹೇಗೆ, ಕಳೆಯಿಂದ ಬೆಳೆ ರಕ್ಷಿಸಿಕೊಳ್ಳುವ ಬಗ್ಗೆ ತಜ್ಞರು ಮಾಹಿತಿ ನೀಡಿದರು.

ಸಿರಿಧಾನ್ಯಗಳಿಗೆ ಆದ್ಯತೆ: ಸಿರಿಧಾನ್ಯ ಸಂಬಂಧಿ ಮಳಿಗೆಗಳು ಈ ಬಾರಿ ಹೆಚ್ಚಾಗಿ ಕಾಣಿಸಿಕೊಂಡವು. ತೋಟಗಾರಿಕೆ, ಜಲಾಯನ ಅಭಿವೃದ್ಧಿ, ಮೀನುಗಾರಿಕೆ, ಪಶುಸಂಗೋಪನೆ, ಮಾರುಕಟ್ಟೆ, ಅರಣ್ಯ ಇತ್ಯಾದಿ ಮಾಹಿತಿಗಳನ್ನು ಒಂದೇ ಸೂರಿನಡಿ ಒದಗಿಸಲಾಯಿತು. ಹೊಸ ತಳಿಗಳು, ಯಂತ್ರೋಪಕರಣಗಳ ಅವಿಷ್ಕಾರ, ಕೃಷಿ ನವೋದ್ಯಮಿಗಳ ನವೀನ ಕೋಧ ತಂತ್ರಜ್ಞಾನವನ್ನು ಪ್ರದರ್ಶಿಸಲಾಯಿತು. ರೈತರ ಕೃಷಿ ಸಮಸ್ಯೆಗಳಿಗೆ ಕೃಷಿ ವಿಜ್ಞಾನಿಗಳು, ಪ್ರಾಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಪರಿಹಾರ ಒದಗಿಸಿದರು.

ರೈತರು ಭಾಗಿ: ಮೇಳಕ್ಕೆ ಆಗಮಿಸಿದ್ದ ರೈತರು, ಯುವ ರೈತರು, ಸಾರ್ವಜನಿಕರು ಉಪಯುಕ್ತ ಮಾಹಿತಿ ಪಡೆದು ಖುಷಿಪಟ್ಟರು. ಪ್ರತಿನಿತ್ಯ ಬರ್ಜಾಗೋಷ್ಠಿಗಳು ನಡೆದವು.



ಬೆಂಗಳೂರು ಕೃಷಿ ವಿವಿ ಕ್ಯಾಂಪಸ್ ಜಿಕೆವಿಕೆಯಲ್ಲಿ ಆಯೋಜಿಸಿದ್ದ 'ಕೃಷಿ ಮೇಳ'ದಲ್ಲಿ ಸೋಮವಾರ ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲಾ ಮತ್ತು ತಾಲೂಕು ಮಟ್ಟದ ಪ್ರಗತಿಪರ ರೈತರಿಗೆ ಪ್ರಶಸ್ತಿ ನೀಡಿ, ಸನ್ಮಾನಿಸಲಾಯಿತು. ಆನಂದ ಗುರೂಜಿ, ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ ಮತ್ತಿತರರಿದ್ದರು.

ರೈತ ಯುವಕರಿಗೆ ಕನ್ನೆ ಸಿಗುತ್ತಿಲ್ಲ

ಬೆಂಗಳೂರು: ಹಿಂದೆ ಯುವ ರೈತರನ್ನು ಮದುವೆಯಾಗಲು ಹೆಣ್ಣುಮಕ್ಕಳು ಮುಂದೆ ಬರುತ್ತಿದ್ದರು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಕೃಷಿ ಕುಟುಂಬದ ರೈತ ಯುವಕರಿಗೆ ಕನ್ನೆ ಸಿಗದಿರುವುದು ದುರದೃಷ್ಟಕರ ಎಂದು ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ ಬೇಸರ ವ್ಯಕ್ತಪಡಿಸಿದ್ದಾರೆ. ಜಿಕೆವಿಕೆಯ ಮುಖ್ಯ ವೇದಿಕೆಯಲ್ಲಿ ನಡೆದ ಸಮಾರೋಪದಲ್ಲಿ ಮಾತನಾಡಿದ ಅವರು, ಆಹಾರದ ಮೂಲ ರೈತ. ರೈತರಿಲ್ಲದೆ ಬದುಕು ಅಸಾಧ್ಯ. ನಾವೆಲ್ಲರೂ ಆಹಾರ ಇಲ್ಲದೆ ಜೀವಿಸುವುದು ಅಸಾಧ್ಯ. ಕಷ್ಟಪಟ್ಟು ಆಹಾರ ಬೆಳೆಯುವ ರೈತರ ಸ್ಥಾನಮಾನ ಬದಲಾಗಬೇಕು ಎಂದರು. ಇದೇ ವೇಳೆ ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲಾ ಹಾಗೂ ತಾಲೂಕು ಮಟ್ಟದ ಪ್ರಗತಿಪರ ರೈತರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಮತ್ತು ಪ್ರದರ್ಶನದ ಅತ್ಯುತ್ತಮ ಮಳಿಗೆಗಳಿಗೆ ಪ್ರಶಸ್ತಿ ನೀಡಲಾಯಿತು. ಕೃಷಿ ವಿವಿಯ ಅಧಿಕಾರಿಗಳು, ವ್ಯವಸ್ಥಾಪನಾ ಮಂಡಳಿ ಸದಸ್ಯರು ಸೇರಿ ಮತ್ತಿತರರಿದ್ದರು.

₹5.28 ಕೋಟಿ ವಹಿವಾಟು

ಮೊದಲ ದಿನ 1.31 ಲಕ್ಷ, ಎರಡನೇ ದಿನ 5.48 ಲಕ್ಷ, ಮೂರನೇ ದಿನ 5.10 ಲಕ್ಷ ಹಾಗೂ ನಾಲ್ಕನೇ

ರಾಜ್ಯದೆಲ್ಲೆಡೆ ಈ ಬಾರಿ ಮಳೆಯ ಅಭಾವ ತಲೆದೋರಿತ್ತು. ರೈತರು ಕೂಡ ಅರ್ಧಂಬರ್ಧ ಬೆಳೆಯಿಂದ ಹಾನಿಗೊಳಗಾಗಿದ್ದರು. ಮುಂಗಾರು ಮತ್ತು ಹಿಂಗಾರು ಮಳೆ ಕೈಕೊಟ್ಟರೂ ಸರ್ಕಾರದ ಭರವಸೆಯಿಂದ ರೈತರು ಕೈಕಟ್ಟಿ ಕೂಡದೇ ಸವಾಲುಗಳಿಗೆ ಎದೆಯೊಡ್ಡಿ ನಿಂತರು. ಕೆಲ ರೈತರು ಚಿತ್ತಿದ ಬೆಳೆಯನ್ನೇ ನಾಶ ಮಾಡಿದರು. ಮುಂದೇನು? ಎಂಬ ಚಿಂತೆಯಲ್ಲಿ ಮುಳುಗಿದ್ದರು. ರಾಜ್ಯದ 224 ತಾಲೂಕುಗಳ ಪೈಕಿ 193 ತಾಲೂಕುಗಳು ತೀವ್ರ ಬರಗಾಲಕ್ಕೆ ತುತ್ತಾಗಿದ್ದವು. ಇದರ ನಡುವೆಯೇ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಪ್ರತಿ ವರ್ಷದಂತೆ ಈ ಬಾರಿಯೂ ಕೃಷಿಮೇಳ-2023 ಹಮ್ಮಿಕೊಂಡಿತ್ತು. ಬರಗಾಲದ ದವಡೆಗೆ ಸಿಲುಕಿರುವ ರೈತರಿಗೆ ಸಾಂತ್ವನ ಹೇಳುವುದಷ್ಟೇ ಅಲ್ಲ, ಕಡಿಮೆ ಮಳೆ, ಮಿತ ನೀರು ಬಳಸಿಯೂ ಕೃಷಿಯಲ್ಲಿ ಹೇಗೆ ಯಶಸ್ಸು ಕಾಣಬೇಕೆನ್ನುವುದನ್ನು ರೈತರಿಗೆ ತಿಳಿ ಹೇಳಲು ಸಿದ್ಧತೆ ನಡೆಸಿತ್ತು. ನಿರೀಕ್ಷೆಯಂತೆ ರೈತರು ಮೇಳಕ್ಕೆ ಬರುತ್ತಾರಾ? ಎನ್ನುವ ಆತಂಕ ಮತ್ತು ಅನುಮಾನವೂ ಇತ್ತು. ಆದರೆ, ಆಗಿದ್ದೇ ಬೇರೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಕೃಷಿಮೇಳ-2023ಕ್ಕೆ ರಾಜ್ಯದ ಎಲ್ಲ ಜಿಲ್ಲೆ ಮತ್ತು ತಾಲೂಕುಗಳಿಂದ ರೈತ ಸಮುದಾಯ ಸಾಗರೋಪಾದಿಯಲ್ಲಿ ಹರಿದು ಬಂದಿತು. ಆದ ನಷ್ಟಕ್ಕೆ ಕಷ್ಟ ಪಡದೇ, ಇಷ್ಟಪಟ್ಟು ಕೃಷಿ ಮಾಡಿದರೆ ಮುಂದೊಂದು ದಿನ ಸ್ಪಷ್ಟವಾದ ಗುರಿ ಸಿಕ್ಕೀತು ಎನ್ನುವ ಸ್ಫೂರ್ತಿಯನ್ನು ಪಡೆದರು. ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ನೇತೃತ್ವದ ಸರ್ಕಾರದ ಮೇಲೆ ಭರವಸೆ ಇಟ್ಟು, ಮುಂದಿನ ಕೃಷಿ ಚಟುವಟಿಕೆಗಳಲ್ಲಿ ಭಾರಿಯಾಗಲು ಮತ್ತಷ್ಟು, ಮಗದಷ್ಟು ಉತ್ಸಾಹ ತುಂಬಿಸಿಕೊಂಡರು. ಇದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಈ ವರ್ಷ ಆಯೋಜಿಸಿದ ಕೃಷಿಮೇಳ-2023ರ ಹೈಲೆಟ್ಸ್.

ಕೃಷಿ ಮೇಳ: ಭರ್ಜರಿ ಯಶಸ್ವಿ

- ಆಹಾರ - ಆರೋಗ್ಯ - ಆದಾಯಕ್ಕಾಗಿ ಸಿರಿ ಧಾನ್ಯಗಳು ಅಂತರಾಷ್ಟ್ರೀಯ ಘೋಷಣೆಯೊಂದಿಗೆ ಆರಂಭವಾದ ಮೇಳ.
- ನವೆಂಬರ್ 17, 18, 19 ಮತ್ತು 20 ರಂದು ನಡೆದ ಮೇಳದಲ್ಲಿ ಲಕ್ಷಾಂತರ ರೈತರು ಭಾಗಿ.
- ನಾಲ್ಕು ದಿನಗಳ ಕಾಲ ನಡೆದ ಕೃಷಿ ಮೇಳ-2023ರಲ್ಲಿ 625ಕ್ಕೂ ಹೆಚ್ಚು ಮಳಿಗೆ ಸ್ಥಾಪನೆ.
- ಕೃಷಿಗೆ ಪೂರಕವಾದ ಅತ್ಯಾಧುನಿಕ ಉಪಕರಣಗಳು, ವಿವಿಧ ರೀತಿಯ ಉದ್ಯಮಗಳ ಸ್ಥಾಪನೆಗೆ ರೈತರಿಗೆ ತಜ್ಞರಿಂದ ಮಾಹಿತಿ.
- ಕೃಷಿ ವಿಶ್ವವಿದ್ಯಾಲಯದಿಂದ ನಾಲ್ಕು ದಿನ ರೈತರಿಗೆ ಶುಚಿ, ರುಚಿಯಾದ ಭೋಜನದ ವ್ಯವಸ್ಥೆ.
- ರೂ.40 ಟೋಕನ್ ಪಡೆದು ಸ್ವಾದಿಷ್ಟ ಹಾಗೂ ಸಾವಯವ ಕೃಷಿಯಾಧಾರಿತ ಸಿರಿಧಾನ್ಯಗಳ ಆಹಾರ ಸೇವನೆ ಮಾಡಿದ ಕೃಷಿಕರು.



ಕೃಷಿ ವಿಶ್ವವಿದ್ಯಾಲಯಗಳು ಕೇವಲ ಪದವೀಧರರನ್ನು ಉತ್ಪಾದಿಸುವ ಕೇಂದ್ರಗಳಾಗಬಾರದು. ಇದರೊಂದಿಗೆ ಲಾಭದಾಯಕ ಕೃಷಿ, ಆರ್ಥಿಕ ಪ್ರಗತಿಯ ಕೃಷಿಯತ್ತ ಯುವಕರು ಪ್ರೇರೇಪಣೆ ಪಡೆಯಬೇಕು. ಹೊಸ ತಂತ್ರಜ್ಞಾನ, ಅವಿಷ್ಕಾರಗಳಂದ ಹೆಚ್ಚು ಹೆಚ್ಚು ಕೃಷಿಯಲ್ಲಿ ತೊಡಗಿಸಿಕೊಳ್ಳುವಂತಾಗಬೇಕು. ರೈತರು ಖಾಲಿಬೆಳೆ ಬೆಳೆಯುವ ಮೂಲಕ ಆರ್ಥಿಕ ಪ್ರಗತಿಗೆ ವಿಶ್ವವಿದ್ಯಾಲಯಗಳು ಕೆಲಸ ಮಾಡಬೇಕು.

-ಸಿದ್ಧರಾಮಯ್ಯ
ಮುಖ್ಯಮಂತ್ರಿಗಳು

ಬರಗಾಲದ ನಡುವೆಯೂ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಜಿಕೆವಿಕೆಯಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಕೃಷಿಮೇಳ-2023ರ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಜರುಗಿತು. ಭೀಕರ ಬರಗಾಲದ ಭಾಯಿಯಲ್ಲಿ ಸೊರಗಿ ಹೋಗಿರುವ ರೈತರಿಗೆ ಪುಷ್ಟಿ ನೀಡಲು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಬರೋಬ್ಬರಿ ನಾಲ್ಕು ದಿನಗಳ ಕಾಲ ಕೃಷಿ ಮೇಳ-2023 ನಡೆಸಿ, ರೈತರಿಗೆ ನೈತಿಕ ಧೈರ್ಯ ತುಂಬಿತು. ನೂರು ಬಾರಿ ಸೋತರೂ ರೈತರು ಸೋಲೊಪ್ಪಿಕೊಳ್ಳಬಾರದು. ಸೋಲಿನಲ್ಲೂ ನಲಿವನ್ನು ಹೊಂದಲು ನಿರಂತರ ಪ್ರಯತ್ನಶೀಲರಾಗಬೇಕು. ಭೂಮಿ ತಾಯಿಯ ಚೊಚ್ಚಲ ಮಕ್ಕಳು ಯಾವುದೇ ಕಾರಣಕ್ಕೂ ಜಗ್ಗದೇ, ಕುಗ್ಗದೇ ಕೃಷಿಯಲ್ಲಿ ಮುಂದೆ ಸಾಗಬೇಕು. ಏನೇ ಸಮಸ್ಯೆ ಇದ್ದರೂ ನಿಮ್ಮೊಂದಿಗೆ ನಾವಿದ್ದೇವೆ. ಎಲ್ಲಕ್ಕಿಂತ ಸರ್ಕಾರ ಇದೆ. ಪ್ರತಿಯೊಂದು ಸಮಸ್ಯೆಗೂ ಪರಿಹಾರ ಇರುವಂತೆ ಕೃಷಿಯ ಸಮಸ್ಯೆಗೂ ಪರಿಹಾರ ಇದೆ. ಎಲ್ಲರೂ ಒಗ್ಗೂಡಿ ಕೃಷಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳೋಣ ಎನ್ನುವ ಭರವಸೆಯನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಕೃಷಿಕ ಸಮುದಾಯಕ್ಕೆ ನೀಡಿತು. ಇದಕ್ಕೆ ರಾಜ್ಯ ಸರ್ಕಾರದ ಚುಕ್ಕಾಣಿ ಹಿಡಿದಿರುವ ಸನ್ಮಾ ನಿಸ್ಪೃಹಜೀವಿ, ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಮತ್ತು ಕೃಷಿ ಸಚಿವರಾದ ಚೆಲುವರಾಯಸ್ವಾಮಿ ಕೂಡ ಧ್ವನಿಗೂಡಿಸಿ ರೈತರಿಗೆ ಸಾಥ್ ನೀಡಿದರು. ಹೀಗಾಗಿ, ನಾಲ್ಕು ದಿನದ ಕೃಷಿ ಮೇಳ-2023 ಅತ್ಯಂತ ಯಶಸ್ವಿಯಾಗಿಯೇ ಜರುಗಿತು.

ನೂತನ ತಳಿಗಳ ಲೋಕಾರ್ಪಣೆ:

ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಆರಂಭವಾಗಿ ಈ ವರ್ಷಕ್ಕೆ 58 ವಸಂತಗಳು ತುಂಬಿದೆ. ಸತತ ಹಲವಾರು ವರ್ಷಗಳಿಂದ ಕೃಷಿಗೆ ಪೂರಕವಾಗಿ ಬೋಧನೆ, ಸಂಶೋಧನೆ, ವಿಸ್ತರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿದೆ. ಕೃಷಿಕರ ಸಮಸ್ಯೆಗೆ ಒಂದೊಂದಾಗಿ ಪರಿಹಾರಗಳನ್ನು ಕಂಡುಕೊಳ್ಳುತ್ತಿದೆ. 1966ರಲ್ಲಿ ಮಾಹಿತಿ ನೀಡಿದರು. ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆ, ಡ್ರೋಣ್ ನಿಂದ ರಸಾಯನ ಸಿಂಪರಣೆ, ಯಂತ್ರೀಕರಣ, ನೈಸರ್ಗಿಕ ಮತ್ತು ಸಾವಯವ ಕೃಷಿ ಸಂಪನ್ಮೂಲಗಳ ಬಳಕೆ, ಸಸ್ಯಿರ ಕೃಷಿ ಪದ್ಧತಿ, ರೈತ ಸ್ನೇಹಿ ಅಪ್ಲಿಕೇಷನ್ ಅಭಿವೃದ್ಧಿಪಡಿಸುವುದು, ಸ್ಟಾರ್ಟ್ ಆಪ್‌ಗಳನ್ನು ಉತ್ತೇಜಿಸುವುದು ಹೀಗೆ ಹಲವಾರು ವೈವಿಧ್ಯ ಬಗೆಯ ನೂತನ ಕೃಷಿ ವಿಧಾನಗಳ ಕುರಿತು ಸಮಗ್ರವಾಗಿ ರೈತರಿಗೆ ಮನವರಿಕೆ ಮಾಡಿಕೊಟ್ಟರು.

ಯಂತ್ರೋಪಕರಣಗಳ ಪ್ರದರ್ಶನ ಮತ್ತು ಮಾರಾಟ:

ಕೃಷಿಮೇಳ - 2023 ಮಳಿಗೆ





ಬೆಂಗಳೂರು ನಗರದ ಜಿಕೆವಿಕೆ ಆವರಣದಲ್ಲಿ ಆಯೋಜಿಸಿರುವ 2023-24ನೇ ಸಾಲಿನ ಕೃಷಿಮೇಳದ ಮೂರನೆಯ ದಿನ ಬೆಂಗಳೂರು ಕೃಷಿ ವಿ.ವಿ.ಯ ಉಪಕುಲಪತಿ ಡಾ.ಎಸ್.ವಿ. ಸುರೇಶ್, ಹಿರಿಯ ವಾರ್ತಾ ತಜ್ಞರು ಹಾಗೂ ಮುಖ್ಯಸ್ಥರಾದ ಡಾ.ಕೆ.ಶಿವರಾಮು ಮತ್ತು ಸಹಾಯಕ ಪ್ರಾಧ್ಯಾಪಕರಾದ ಡಾ.ಎಂ.ಎ.ಮೂರ್ತಿ "ಕೋಲಾರವಾಣಿ" ಜನಪ್ರಿಯ ಪ್ರಾದೇಶಿಕ ಕನ್ನಡ ದಿನಪತ್ರಿಕೆ ಮಳಿಗೆಗೆ ಭೇಟಿ ನೀಡಿ ಕುಶಲೋಪರಿ ವಿಚಾರಿಸಿ ಶುಭ ಹಾರೈಸಿದರು.

ಕೃಷಿಮೇಳ-2023ಕ್ಕೆ ಈ ವರ್ಷ ರೈತರು, ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ಸೇರಿ ಒಟ್ಟು 17 ಲಕ್ಷ ಜನರು ಭಾಗವಹಿಸಿದ್ದರು. ಕೃಷಿಯ ಕುರಿತು ಜನರಲ್ಲಿ ಜಾಗೃತಿ ಮೂಡುತ್ತಿದೆ. ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳಲ್ಲಿ ಕುತೂಹಲ ಮೂಡಿತ್ತು. ಕೃಷಿ ಮೇಳದಲ್ಲಿ ಸ್ವ-ಸಹಾಯ ಸಂಘಗಳು ಮತ್ತು ಅತ್ಯಾದುನಿಕ ಕಂಪನಿಗಳಿಗೆ ಕೃಷಿಗೆ ಪೂರಕವಾದ ಉಪಕರಣಗಳ ಖರೀದಿಗಾಗಿ 4 ಕೋಟಿ ರೂ.ವ್ಯವಹಾರ ನಡೆದಿದೆ. ಬರಗಾಲದಲ್ಲೂ ರೈತರು ಅಂಜದೇ, ಅಳುಕದೇ ಕೃಷಿಯಲ್ಲಿ ತೊಡಗಿಸಿಕೊಳ್ಳಲು ಮುಂದೆ ಬಂದಿದ್ದಾರೆ. ಇದು ನಿಜಕ್ಕೂ ಖುಷಿಯ ವಿಚಾರ.

-ಡಾ.ಜಿ.ಎಲ್.ಮಧುಪ್ರಸಾದ್,
ವಿಸ್ತರಣಾ ನಿರ್ದೇಶಕರು,
ಬೆಂಗಳೂರು ಕೃಷಿ ವಿಶ್ವವಿದ್ಯಾಲಯ,
ಬೆಂಗಳೂರು.

ಕ್ಷೇತ್ರೋತ್ಸವ ಆರಂಭಿಸಿದ್ದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಬಳಿಕ ಇದನ್ನು ಕೃಷಿಮೇಳವೆಂಬ ಹೆಸರಿನೊಂದಿಗೆ ಕೃಷಿಗೆ ಸಂಬಂಧಿಸಿದ ಸಮಗ್ರ ಅಂಶಗಳನ್ನು ಚರ್ಚಿಸಿ, ಅವಲೋಕಿಸಿ, ಸಂಶೋಧಿಸಿ, ಹೊಸ ಹೊಸ ಆವಿಷ್ಕಾರಗಳ ಬಗ್ಗೆ ರೈತರಿಗೆ ಮಾಹಿತಿ ನೀಡುತ್ತಿದೆ. ಆಷ್ಟೇ ಅಲ್ಲದೆ, ಭೂಮಿಯೊಂದಿಗೆ ದಣಿದು ಹಣ್ಣಾದ ರೈತರನ್ನು ಗುರುತಿಸಿ ಮಾನ, ಸನ್ಮಾನ, ಪ್ರಶಸ್ತಿಗಳನ್ನು ನೀಡಿ ಗೌರವಿಸುವ ಹರಿಣಾಶ ಬೆಳೆಸಿಕೊಂಡಿದೆ. ಈ ಕಾರ್ಯ ಕಳೆದ ಹಲವು ದಶಕಗಳಿಂದ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಈ ಬಾರಿಯೂ ರಾಜ್ಯಮಟ್ಟದ ಆರು ಜನರಿಗೆ ಕೃಷಿ ಸಾಧಕ ಪ್ರಶಸ್ತಿ ನೀಡಿ ಗೌರವಿಸದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು, ಬಳಿಕ ರಾಜ್ಯದ ಎಲ್ಲ ಜಿಲ್ಲೆಗಳ ಹಾಗೂ ತಾಲೂಕುಗಳ ಸಾಧಕ ರೈತರನ್ನೂ ಗುರುತಿಸಿ ಸನ್ಮಾನಿಸಿದೆ. ಈ ಬಾರಿ ಎಲ್ಲ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಬಿಡುಗಡೆಗೊಂಡಿರುವ ನೂತನ ತಳಿಗಳ ಪ್ರಾತ್ಯಕ್ಷಿಕೆ ಗೆಳನ್ನು ಪರಿಚಯಿಸಿ ಮುಖ್ಯಮಂತ್ರಿಗಳಿಂದ ಲೋಕಾರ್ಪಣೆಗೊಳಿಸಿದೆ. ರಾಗಿ, ಸಾಮೆ, ಬರಗು, ಸೂರ್ಯಕಾಂತಿ, ಹಲಸು, ಎರೆಗೊಬ್ಬರ, ಕಾಂಪೋಸ್ಟ್, ರಾಷ್ಟ್ರೀಯ ಬೀಜ ಪ್ರಾಯೋಜನೆಗಳ ಕುರಿತು ವಿಸ್ತಾರವಾಗಿ ಮಾಹಿತಿ ನೀಡಿದೆ. ಇದರಿಂದಾಗಿ ರೈತರು ಒಂದು ರೀತಿ ಉತ್ತೇಜನಗೊಂಡು ಮರಳಿ ಕೃಷಿಯಲ್ಲಿ ಉತ್ಸಾಹದಿಂದಲೇ ತೊಡಗುವಂತೆ ಪ್ರೇರೇಪಿಸಿದ್ದಾರೆ.

ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ:

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಆಯೋಜಿಸಿದ ಕೃಷಿಮೇಳ-2023ರಲ್ಲಿ ಹಲವಾರು ಕೃಷಿ ಸಂಶೋಧಕರು, ಪ್ರಾಧ್ಯಾಪಕರುಗಳು ಸಹ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ರೈತರಿಗೆ ವೈವಿಧ್ಯ ನಮೂನೆಯ ಬೆಳೆ ಪದ್ಧತಿ, ಕೃಷಿಯಲ್ಲಿ ಸುಧಾರಿತ ಆಧುನಿಕ ಪದ್ಧತಿ ಅಳವಡಿಕೆ ಕುರಿತು ಸವಿಸ್ತಾರವಾಗಿ ಉಪನ್ಯಾಸ ನೀಡಿದರು. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ವಿ.ಸುರೇಶ್, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಡಾ.ಆರ್.ಸಿ.ಜಗದೀಶ್, ತಂಜಾವೂರಿನ ರಾಷ್ಟ್ರೀಯ ಆಹಾರ ತಂತ್ರಜ್ಞಾನ, ಉದ್ಯಮಶೀಲತೆ ಮತ್ತು ನಿರ್ವಹಣೆ ಸಂಸ್ಥೆಯ ಡಾ.ಎ.ಹೆಳವಿಮುತ್ತು, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಎಂ.ಎಸ್.ನೀಲವಂತರ್, ಡಾ.ಕೆ.ನಾರಾಯಣಗೌಡ, ತಿಕ್ಷಣ ನಿರ್ದೇಶಕ ಡಾ.ಕೆ.ಸಿ.ನಾರಾಯಣಸ್ವಾಮಿ, ಕೃಷಿ ಡೀನ್ ಗಳಾದ ಡಾ.ಎನ್.ಬಿ.ಪ್ರಕಾಶ, ಸಂಶೋಧನಾ ನಿರ್ದೇಶಕರಾದ ಡಾ.ವೆಂಕಟೇಶ, ಜಿಕೆವಿಕೆಯ ವಿಸ್ತರಣಾ ನಿರ್ದೇಶಕ ಡಾ.ವಿಎಲ್ ಮಧುಪ್ರಸಾದ್ ಸೇರಿದಂತೆ ಹಲವು ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿದ್ವಾಂಸರು, ಸಂಶೋಧಕರು ರೈತರಿಗೆ ಮಾರ್ಗದರ್ಶನ ಮಾಡಿದರು. ಬರಗಾಲದ ಸಂದರ್ಭದಲ್ಲಿ ಮಿತವಾದ ನೀರನ್ನು ಬಳಸಿ ಹೇಗೆ ಕೃಷಿ ಮಾಡಬೇಕು? ಎನ್ನುವುದರಿಂದ ಹಿಡಿದು ಸಿರಿಧಾನ್ಯಗಳ ಮೌಲ್ಯ ವರ್ಧನೆ, ಕೃಷಿಯಲ್ಲಿ ಸಮಗ್ರ ಕೃಷಿ ಪದ್ಧತಿ ಅಳವಡಿಕೆಗಳ ಕುರಿತು ಹಾಕಲು ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಯೋಜನೆಯಲ್ಲಿ ಆಕಾಶ ಕಲ್ಪಿಸಿಕೊಡಲಾಗಿತ್ತು. ಯಂತ್ರೋಪಕರಣಗಳ ಪ್ರಾತ್ಯಕ್ಷಿಕೆ ಮತ್ತು ಪ್ರದರ್ಶನಗಳನ್ನು ವೀಕ್ಷಿಸಲು ಸಾರ್ವಜನಿಕರಿಗೆ, ರೈತರಿಗೆ ಮತ್ತು ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಲಾಗಿತ್ತು. ಸಪೋಟ ಕಾಯಿ ಕೀಳುವ ಸಾಧನ, ಮಾವಿನ ಕಾಯಿ ಕೀಳುವ ಸಾಧನ, ತೆಂಗಿನಕಾಯಿ ಸಿಪ್ಪೆ ಸುಲಿಯುವ ಸಾಧನ, ಕಡಲೆಕಾಯಿ ಬೀಜ ಬಿಡಿಸುವ ಯಂತ್ರ, ಮುಸುಕಿನ ಜೋಳ ಮತ್ತು ಸೂರ್ಯಕಾಂತಿ ಬೀಜ ಬಿಡಿಸುವ ಡಿಇನ್ 1 ಸಾಧನ, ಅಡಿಕೆ ಸಿಪ್ಪೆ ಬಿಡಿಸುವ ಸಾಧನ, ಸೂರ್ಯಕಾಂತಿ ಬೀಜದ ಹೊಟ್ಟು ತೆಗೆಯುವ ಯಂತ್ರ, ಧಾನ್ಯ ತೂರುವ ಯಂತ್ರ, ಹೊಂಗೆ ಬೀಜ ಬಿಡಿಸುವ ಯಂತ್ರ, ಸಿರಿಧಾನ್ಯಗಳ ಹೊಟ್ಟು ತೆಗೆಯುವ ಯಂತ್ರ, ರಾಸಾಯನಿಕ ಬಳಕೆಯಿಲ್ಲದೆ ದ್ವಿದಳಧಾನ್ಯಗಳ ಸುರಕ್ಷಿತ ಶೇಖರಣೆಗೆ ಪದರ ತಂತ್ರಜ್ಞಾನ, ಅಧಿಕ ಸಾಮರ್ಥ್ಯದ ಹಣಸೆಹಣ್ಣು ಸಿಪ್ಪೆ ತೆಗೆಯುವ ಯಂತ್ರ, ಬಟ್ಟೆಚೀಟ್ ಹೊಟ್ಟು ತೆಗೆಯುವ ಯಂತ್ರ, ಬಿಸಿಗಾಳಿಯಲ್ಲಿ ಅರಳು ಮಾಡುವ ಯಂತ್ರ, ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳು, ಕ್ವಿನೋವಾ ಮೌಲ್ಯವರ್ಧಿತ ಉತ್ಪನ್ನಗಳು, ರೆಡಿ ಟು ಈಟ್ ಮತ್ತು ರೆಡಿ ಟು ಕುಕ್ ಸಿರಿಧಾನ್ಯಗಳ ಆಹಾರ ಪದಾರ್ಥಗಳು, ಎಲ್ಲ ಬಗೆಯ ಹೊಲ, ಗದ್ದೆಗಳಿಗೆ ಹೊಂದಿಕೊಳ್ಳುವ ಟ್ರಾಕ್ಟರ್ ಪ್ರದರ್ಶನ ಮತ್ತು ಮಾರಾಟ, ಕೂರಿಗೆ, ರಂಟೆ ಹೊಡೆಯುವ ಚಿಕ್ಕ ಮತ್ತು ದೊಡ್ಡ ಯಂತ್ರೋಪಕರಣಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಆಗಮಿಸಲಾಗಿತ್ತು.

ಬರ ನಿರ್ವಹಣೆಯಲ್ಲಿ ಸಿರಿಧಾನ್ಯಗಳ ಪಾತ್ರ ಬಹುಮುಖ್ಯವಾಗಿದೆ. ರೈತರು ಸಿರಿಧಾನ್ಯಗಳನ್ನು ಬೆಳೆಯುತ್ತ ಗಮನ ಹರಿಸಬೇಕು. ಕೃಷಿಮೇಳದಲ್ಲಿ ಬೀಜ ಸಂತೆ, ಬೀಜ ವಿತರಣೆ ಏಳಗೊಂಡಂತೆ ಎಲ್ಲ ಬಗೆಯ ಪ್ರಾತ್ಯಕ್ಷಿಕೆಗಳಲ್ಲಿ ಭಾಗವಹಿಸಿ ಭವಿತವ್ಯದಲ್ಲಿ ಕೃಷಿಯನ್ನು ಉತ್ತಮಪಡಿಸಲು ಶ್ರಮಿಸಬೇಕು. ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಹಲವಾರು ನೂತನ ಆವಿಷ್ಕಾರಗಳನ್ನು ನಡೆಸಿದ್ದು, ರೈತರಿಗೆ ಪ್ರತಿ ಹಂತದಲ್ಲೂ ಮಾರ್ಗದರ್ಶನ, ಮಾಹಿತಿ ಮತ್ತು ನೆರವು ನೀಡಲು ಸಿದ್ಧರಿದ್ದೇವೆ. ಹೆಚ್ಚು ಹೆಚ್ಚು ಕೃಷಿಯಲ್ಲಿ ತೊಡಗಿಸಿಕೊಳ್ಳಲು ರೈತರು ಮುಂದೆ ಬರಬೇಕು ಎಂದು ಡಾ.ಎಸ್.ವಿ.ಸುರೇಶ್, ಕುಲಪತಿಗಳು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಇವರು ತಿಳಿಸಿದರು.

ಕುಕ್ಕುಟ ಪ್ರಿಯರಿಗೆ 5 ಕೆ.ಜಿ.ತೂಕದ ಕೋಳಿ ಮಾರಾಟ ಮತ್ತು ಪ್ರದರ್ಶನ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ನವೆಂಬರ್ 17ರಿಂದ ನಾಲ್ಕು ದಿನಗಳ ಕಾಲ ಹಮ್ಮಿಕೊಂಡಿದ್ದ ಕೃಷಿಮೇಳ-2023ರ ಮಾರಾಟ ಮತ್ತು ವಸ್ತು ಪ್ರದರ್ಶನದಲ್ಲಿ ಕುಕ್ಕುಟ ಪ್ರಿಯರಿಗೆ 3 ಕೆಜಿಯಿಂದ 5 ಕೆ.ಜಿ.ತೂಕವಿರುವ ಕೋಳಿಗಳನ್ನು ಪ್ರದರ್ಶಿಸಿ ಮಾರಾಟ ಮಾಡಲಾಗಿತ್ತು.

ಸಾಮಾನ್ಯವಾಗಿ ನಾಟಿ ಕೋಳಿಗಳು 1 ಕೆ.ಜಿ.ಯಿಂದ 2 ಆಥವಾ 2.5 ಕೆ.ಜಿ. ತೂಕ ಇರುವುದು ವಾಡಿಕೆ. ಹೆಚ್ಚಾಗದ ಹಾಗು ವೈಜ್ಞಾನಿಕ ಮಹಾವಿದ್ಯಾಲಯ ಕುಕ್ಕುಟ ಶಾಸ್ತ್ರ ವಿಭಾಗವು ಸಾರಥಪಡಿಸಿದ ಕುಕ್ಕುಟಗಳು 3 ಕೆ.ಜಿ.ಯಿಂದ ಬರೋಬ್ಬರಿ 5 ಕೆ.ಜಿ.ತೂಕ ವಿದ್ದು ಮಾಂಸಾಹಾರಿ ಪ್ರಿಯರ ಗಮನ ಸೆಳೆದವು. ಕುಕ್ಕುಟ ವಿಜ್ಞಾನ ವಿಭಾಗದಲ್ಲಿ ಅಭಿವೃದ್ಧಿಪಡಿಸಿದ ಹೊಸ ಮಿಶ್ರ ತಳಿಯ ಕೋಳಿಗಳಾದ ಗಿರಿರಾಜ, ಸ್ವರ್ಣಧಾರ ಮತ್ತು ಕರ್ನಾಟಕ ರಾಜ್ಯದ ನಾಲ್ಕು ವಲಯಗಳಿಂದ ನಾಟಿ ಕೋಳಿಗಳ ಫಲೀಕೃತ ಮೊಟ್ಟೆಗಳನ್ನು ತಂದು ಅಭಿವೃದ್ಧಿಪಡಿಸಲಾಗಿದೆ. ನಾಟಿ ಕೋಳಿ ಮರಿಗಳನ್ನು ಸಹ ಎಲ್ಲ ವಿಧದ ಹವಾಮಾನದ ಪ್ರದೇಶಗಳಲ್ಲಿ ಸಾಕಣೆ ಮಾಡಬಹುದಾಗಿದೆ. ಈ ಕುರಿತು ಕೃಷಿ ಮೇಳ-2023ರಲ್ಲಿ ಕುಕ್ಕುಟ ಪ್ರದರ್ಶನದ ವೇಳೆ ಆಗಮಿಸಿದ್ದ ರೈತರಿಗೆ ಹಾಗು ವೈಜ್ಞಾನಿಕ ಮಹಾವಿದ್ಯಾಲಯದ ಪ್ರಾಧ್ಯಾಪಕರು ಮಾಹಿತಿ ನೀಡಿದರು. ಮಾಂಸಕ್ಕಾಗಿ ಗಿರಿರಾಜ ಮತ್ತು ಸ್ವರ್ಣಧಾರ ಹುಂಜಗಳನ್ನು 12ನೇ ವಾರದಲ್ಲಿ ಮಾರಾಟ ಮಾಡಬಹುದು. ಮಾಂಸಕ್ಕಾಗಿ ನಾಟಿ ಕೋಳಿಗಳ ಹುಂಜಗಳನ್ನು 20ನೆ ವಾರದಲ್ಲಿ ಮಾರಾಟ ಮಾಡಬಹುದು. ನಂತರ ಗಿರಿರಾಜ, ಸ್ವರ್ಣಧಾರ ಮತ್ತು ನಾಟಿ ಹೆಣ್ಣು ಕೋಳಿಗಳನ್ನು ಸಾಕಣೆ ಮಾಡಿ ಮೊಟ್ಟೆಗಳನ್ನು 72ನೇ ವಾರದವರೆಗೆ ಪಡೆಯಬಹುದುದಾಗಿದೆ. ಇವು ನಾಟಿ ಕೋಳಿಗಳಿಗಿಂತ ವಿವಿಧ ಬಣ್ಣಗಳನ್ನು ಹೊಂದಿವೆ. ಗಿರಿರಾಜ, ಸ್ವರ್ಣಧಾರ ಮತ್